ಕರ್ನಾಟಕ ವಿಧಾನ ಸಭೆ

ಗುರುವಾರ 29ನೇ ನವೆಂಬರ್ 1990 ಮಾರ್ಗಶಿರ 8, 1912 ಶಕ
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ 1–00 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು: (ಶ್ರೀ ಎಸ್.ಎಂ. ಕೃಷ್ಣ ಅವರು ಪೀಠವನ್ನು ಅಲಂಕರಿಸಿದರು)

ವಿರೋಧ ಪಕ್ಷದ ಸದಸ್ಯರಿಂದ ಧರಣಿ

ಜಿಲ್ಲಾ ಪರಿಷತ್ ತಿದ್ದುಪಡಿ ಮಸೂದೆ ಬಗ್ಗೆ

(ಗೊಂದಲ)

(ವಿರೋಧ ಪಕ್ಷದ ಸದಸ್ಯರಿಂದ **ಕರಾಳ ಶಾಸನಕ್ಕೆ ಧಿಕ್ಕಾರ, ಸಂವಿಧಾನ** ವಿರೋಧಿ ಕಾನೂನಿಗೆ ಧಿಕ್ಕಾರ ಎಂಬ ಕೂಗು)

† ಶ್ರೀ ವಾಟಾಳ್ ನಾಗರಾಜ್ :– ಸನ್ಮಾನ್ಯ **ಅಧ್ಯಕ್ಷರೆ, ಕಳೆದ** ಎರಡು ದಿವಸಗಳಿಂದಲೂ ಈ ಸದನದಲ್ಲಿ ಪ್ರಜಾವಿರೋಧಿ ಮಸೂದೆಯನ್ನು ಸರ್ಕಾರ ತರುವ **ಹಠಮಾರಿತನ** ಮಾಡಿದ್ದರಿಂದ ಇಲ್ಲಿ ಆ ಪ್ರಜಾತಂತ್ರ ವಿರೋಧ ನೀತಿಯನ್ನು ವಿರೋಧಿಸಿ ಇಲ್ಲಿ ಧರಣಿ ಸತ್ಯಾಗ್ರಹ **ನಡೆಸುತ್ತಿದ್ದಾರೆ**. ಅವರಿಗೆ ನಾವೂ ಕೂಡ ಬೆಂಬಲವನ್ನು ಕೊಟ್ಟಿದ್ದೇವೆ.

(ಗೊಂದಲ)

ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ಈಗಾಗಲೇ ಮೈಸೂರು ಜಿಲ್ಲಾ ಪರಿಷತ್‌ನವರು ಕೂಡ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಕಾಂಗ್ರೆಸ್‌ನವರು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ಮತ್ತೊಮ್ಮೆ ನಾವು ಕೊನೆಯ ಎಚ್ಚರಿಕೆಯಾಗಿ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಒಂದು ಪ್ರಜಾ ವಿರೋಧಿ ಮಸೂದೆಯ ಬಗ್ಗೆ ಮತ್ತೊಂದು ಸಾರಿ ವಿರೋಧ ಪಕ್ಷಗಳ ಜೊತೆ ಮಾತುಕತೆಯನ್ನು ಮಾಡಿ ಒಂದು ಸುಮಧುರವಾದ ವಾತಾವರಣವನ್ನು ನಿರ್ಮಾಣ ಮಾಡಲಿ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಸರ್ಕಾರ ಸುಮ್ಮನೆ ಹಠಮಾರಿತನವನ್ನು ಹಿಡಿದು ಕೂತುಕೊಳ್ಳುವುದು ಸರಿಯಲ್ಲ. ಇವತ್ತು 11 ಗಂಟೆಗೆ ಈ ಸದನ ಸೇರಬೇಕಾಗಿತ್ತು. ಈಗ 1 ಗಂಟೆಯಾದರೂ ಸಭೆ ಸೇರದೇ ಇರುವುದಕ್ಕೆ ಕಾರಣ ಏನೆಂಬುದು ನಮಗೆ ಗೊತ್ತಾಗುತ್ತಿಲ್ಲ. ತೆರೆಯ ಮರೆಯಲ್ಲಿ ಏನು ನಡೆಯುತ್ತಿದೆ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ನಮ್ಮನ್ನು ಅವರು ಕರೆದಿಲ್ಲ. ಇನ್ನೊಂದು ಸಾರಿ ಅವರು ತಮ್ಮ ಉದಾರತೆಯಿಂದ ಚರ್ಚೆಗೆ ಕರೆದು ಮಾತನಾಡಬೇಕು. ಪ್ರಜಾಪ್ರಭುತ್ವದಲ್ಲಿ ಮಾತುಕತೆಯ ಮೂಲಕ ಬಹಳ ಸಮಸ್ಯೆಗಳು ಬಗೆಹರಿಯುತ್ತವೆ. ಆದ್ದರಿಂದ ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ, ಮತ್ತೊಮ್ಮೆ ಎಲ್ಲ ವಿರೋಧ ಪಕ್ಷಗಳ ಮುಖಂಡರುಗಳನ್ನು ಕರೆದು ಚರ್ಚಿಸಿ ಒಂದು ತೀರ್ಮಾನಕ್ಕೆ ಬರಲಿ ಎಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಧ್ಯಕ್ಷರೆ, ಕಳೆದ 2 ದಿವಸಗಳಿಂದ ಈ ಒಂದು ಜಿಲ್ಲಾ ಪರಿಷತ್ತಿನ ಶಾಸನಕ್ಕೆ ತಿದ್ದುಪಡಿಯನ್ನು ತಂದಿರುವ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ಅಥವಾ ವಿರೋಧವನ್ನು ವ್ಯಕ್ತಪಡಿಸುವಂಥ ಪ್ರಯತ್ನವನ್ನು ಮಾಡಿದ್ದೇವೆ. ಮತ್ತು ವಾಕೌಟ್ ಸಹ ಮಾಡಿದ್ದೇವೆ. ಇನ್ನುಳಿದಂತಹ ವಿರೋಧಪಕ್ಷದ ನಾಯಕರು ಮತ್ತು ಅವರ ಸದಸ್ಯರು ಧರಣಿಯನ್ನು ಕೂತಿದ್ದಾರೆ. ನಾನು ನಿನ್ನೆಯ ದಿವಸ ಮಾತನಾಡುವಾಗ ಹೇಳಿದ್ದೆ, ಮಾನ್ಯ ಬಸವಲಿಂಗಪ್ಪನವರ ಜೊತೆ ನಾವು ಮಾತುಕತೆಗೆ ಹೋದರೆ ಆ ಮಾತುಕತೆ ಫಲಕಾರಿಯಾಗುವುದಿಲ್ಲ, ಕಲ್ಲು ಬಂಡೆಯ ಜೊತೆ ಮಾತನಾಡಿದಂತಾಗುತ್ತದೆ, ಅಥವಾ ಗೋರ್ಕಲ್ಲು ಮೇಲೆ ಮಳೆ ಸುರಿದಂತಾಗುತ್ತದೆ, ಆದ್ದರಿಂದ ಮಾನ್ಯ ಸಭಾ ನಾಯಕರು ಇದ್ದರೆ ಈ ಸಮಸ್ಯೆಯನ್ನು ಬಗೆಹರಿಸಬಹುದೆಂದು ಹೇಳಿದ್ದೆ. ಈ ಬಗ್ಗೆ ನನ್ನ ಒಂದು ಸಲಹೆ ಎಂದರೆ, ಇವತ್ತು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತ ಇರತಕ್ಕವರು ಯಾವ ಬಿಲ್ಲನ್ನು ಬೇಕಾದರೂ ಸದನದ ಮುಂದೆ ತಂದು ಪಾಸ್ ಮಾಡಿಸಿಕೊಳ್ಳಬಹುದು. ಇವತ್ತು 5 ವರ್ಷ ಇದ್ದಂಥ ಅಧಿಕಾರದ ಅವಧಿಯನ್ನು 4 ವರ್ಷಕ್ಕೆ ತಂದಿದ್ದೀರಿ. ನಾಳೆ

ಯಾರಾದರೂ ತಲೆ ಕೆಟ್ಟವರು ಅಧಿಕಾರಕ್ಕೆ ಬಂದರೆ ಅವರು 3 ವರ್ಷಕ್ಕೆ ಇಳಿಸಬಹುದು. ಅದು ಮುಂದೆ ಅಧಿಕಾರಕ್ಕೆ ಬರತಕ್ಕವರಿಗೆ ಬಿಟ್ಟದ್ದು. ಆದರೆ ಈ ಪ್ರಜಾತಂತ್ರ ವ್ಯವಸ್ಥೆ ಏನಿದೆ ಎಂದರೆ ಈ ವಿಧಾನ ಸಭೆಯೊಳಗೆ ನಾವು ಕೆಲಸ ಮಾಡತಕ್ಕ ವ್ಯವಸ್ಥೆ ಏನಿದೆ, ಇದರ ಬಗ್ಗೆ ಜನತೆ ನಮ್ಮನ್ನು ನಂಬಿ ಇಲ್ಲಿಗೆ ಏನು ಕಳುಹಿಸಿಕೊಟ್ಟಿದ್ದಾರೆ ಅವರೇ ಇವತ್ತಿನ ದಿವಸ ನಮ್ಮ ಬಗ್ಗೆ ಸಂಶಯದಿಂದ ಅನುಮಾನದಿಂದ ನೋಡತಕ್ಕ ಒಂದು ವಿಚಿತ್ರ ವಾತಾವರಣ ಇವತ್ತು ಕರ್ನಾಟಕ ರಾಜ್ಯದ ಜನತೆಯಲ್ಲಿ ಮೂಡಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಾವು ಇಲ್ಲಿ ಧರಣಿ ಕೂತು ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡಬೇಕೆಂದು ನಾನು ಇಷ್ಟಪಡುವುದಿಲ್ಲ. ತಾವು ಬೇಕಾದರೆ ನಮ್ಮನ್ನು ಹೊರಗಡೆ ಹಾಕಿಸಿ, ಅವರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಕೊಳ್ಳಲಿ. ಏಕೆಂದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮನ್ನು ಇಲ್ಲಿಗೆ ಕಳುಹಿಸಿರತಕ್ಕ ಜನರು ಹೊರಗಡೆ ಇದ್ದಾರೆ. ಅವರ ಜೊತೆ ನಾವೂ ಹೋಗಿ ಹೋರಾಟ ಮಾಡುತ್ತೇವೆ, ಬೀದಿಗೆ ಇಳಿಯುತ್ತೇವೆ. ಇಲ್ಲದಿದ್ದರೆ ಇಲ್ಲಿ ತಂದಿರತಕ್ಕ ಈ ಅನೇಕ ತಿದ್ದುಪಡಿಗಳು ನಿಲ್ಲುವುದಿಲ್ಲ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಇವತ್ತು ತಂದಿರತಕ್ಕ ಅನೇಕ ತಿದ್ದುಪಡಿಗಳ ಬಗ್ಗೆ ಕೋರ್ಟ್‌ಗೆ ಹೋದರೆ ಒಂದು ಕ್ಷಣ ಕೂಡ ಇವು ನಿಲ್ಲುವುದಿಲ್ಲ. ಇದು ಆಡಳಿತ ಪಕ್ಷದವರಿಗೂ ಗೊತ್ತಿದೆ. ಇವರು ಇದರ ಬಗ್ಗೆ ಲೀಗಲ್ ಒಪಿನಿಯನ್‌ನ್ನು ತೆಗೆದುಕೊಂಡು ಈ ಸದನದ ಮುಂದಿಟ್ಟಿಲ್ಲ. ಅವರು ಏನೇನು ಸಲಹೆಯನ್ನು ಕೊಟ್ಟಿದ್ದಾರೆಂಬುದನ್ನು ಹೇಳಲಿ. ಈಗ ಅವರು ತಮ್ಮ ಮನಸ್ಸಿಗೆ ಬಂದಂಥ ಈ ರೀತಿಯ ತಿದ್ದುಪಡಿಗಳನ್ನು ತರತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇಲ್ಲಿ ಉದ್ದೇಶ ಸ್ಪಷ್ಟವಾಗಿದೆ. ಲೋಕಸಭೆಯ ಚುನಾವಣೆ ಇನ್ನು ಕೆಲವೇ ತಿಂಗಳಲ್ಲಿ ಬರಲಿದೆ. ಅಷ್ಟರಲ್ಲಿ ಯಾರೂ ಅಧಿಕಾರಗಳಲ್ಲಿರಬಾರದು, ಈ ಲಾಭವನ್ನು ಮಾಡಿಕೊಂಡು ತಾವು ಅಧಿಕಾರಕ್ಕೆ ಬರಬೇಕೆಂಬ ಭಾವನೆ ಅವರ ಮನಸ್ಸಿನಲ್ಲಿರಬಹುದು. ಇದಕ್ಕೆ ಜನರು ಸರಿಯಾದ ಪಾಠವನ್ನು ಕಲಿಸತಕ್ಕ ಕಾಲ ಹತ್ತಿರ ಬಂದಿದೆ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇಲ್ಲಿ ಮಾನ್ಯ ಸಭಾ ನಾಯಕರಿದ್ದಾರೆ; ಕಳೆದ ಎರಡೂವರೆ ದಿವಸದಿಂದ ಮಾತುಕತೆಯ ಮೂಲಕ ಚರ್ಚೆ ನಡೆಯುತ್ತಿದೆ; ಈಗಲಾದರೂ ಒಂದು ತೀರ್ಮಾನಕ್ಕೆ ಬಂದು ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಮಾನ್ಯ ಸಭಾ ನಾಯಕರು ಅವಕಾಶವನ್ನು ಮಾಡಿಕೊಡಲಿ. ಇಲ್ಲದಿದ್ದರೆ ನಮ್ಮನ್ನು ದಯವಿಟ್ಟು ಹೊರಗೆ ಹಾಕಿ ಅವರ ಮನಸ್ಸಿನಲ್ಲಿ ಏನೇನು ಬಿಲ್‌ಗಳಿವೆಯೋ ಮತ್ತು ಮುಂದಿನ ದಿನಗಳಲ್ಲಿ ಇನ್ನೇನನ್ನು ಮಾಡಿಕೊಳ್ಳಬೇಕೆಂದು ಅವರ ಮನಸ್ಸಿನಲ್ಲಿದೆಯೋ ಅದನ್ನೆಲ್ಲಾ ಅವರು ಮಾಡಿಕೊಳ್ಳಲಿ. ಆದರೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ; ಈ ವಿಚಾರದಲ್ಲಿ ಈ ರಾಜ್ಯದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ; ಈವತ್ತು ಶಾಸಕರಾಗಿ ನಾವು ತಲೆತಗ್ಗಿಸಬೇಕಾದಂಥ ಪರಿಸ್ಥಿತಿ ಬಂದಿದೆ. ಏಕೆಂದರೆ ಮೈಸೂರು ಜಿಲ್ಲಾ ಪರಿಷತ್ತಿನ ಸದಸ್ಯರಾದಂಥ ದೊರೈರಾಜ್ ಎನ್ನುವವರು ಶಾಸಕರ ವಿರುದ್ಧ ಚಳುವಳಿಯನ್ನೂ ಕೂಡ ಮಾಡಬೇಕಾಗಿ ಬರಬಹುದೆಂದು ಹೇಳುತ್ತಿದ್ದಾರೆ. ಅವರು ಹೇಳುವುದರಲ್ಲಿ ಅರ್ಥವಿದೆ. ಏಕೆಂದರೆ ನಾವು ವಿಧಾನ ಸಭೆಯೊಳಗೆ ಬಂದಕೂಡಲೇ 5 ವರ್ಷ ಇದ್ದಂಥ ಅಧಿಕಾರವನ್ನು 4 ವರ್ಷಗಳಿಗೆ ಇಳಿಸುವ ಉದ್ದೇಶ ಏನಿದೆ ಮತ್ತು ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಅನೇಕ ಅರ್ಥ ಇಲ್ಲದಂಥ ತಿದ್ದುಪಡಿಗಳನ್ನು ತಂದು ಇವತ್ತು ತಮ್ಮ ಕೈಗೆ ಅಧಿಕಾರವನ್ನು ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಿದ್ದಾರೆ; ಕಳೆದ ಅನೇಕ ವರ್ಷಗಳಿಂದ ಅಧಿಕಾರಿಗಳ ಕೈಯಲ್ಲಿ ಈ ಅಧಿಕಾರವಿತ್ತು. ಇವತ್ತು ಹಳ್ಳಿಗಳ ಪರಿಸ್ಥಿತಿ ಏನಾಗಿದೆ? ಏನು ಸುಧಾರಣೆಯಾಗಿದೆ? ಇವತ್ತು ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಇರತಕ್ಕ ಅಧಿಕಾರವನ್ನು ಮೊಟಕುಗೊಳಿಸಿ ಮತ್ತೆ ಅಧಿಕಾರಿಗಳ ಮೂಲಕ ತೊಘಲಕ್ ದರ್ಬಾರನ್ನು ಮಾಡುವಂಥ ಪ್ರಯತ್ನ ಏನು ನಡೆಯುತ್ತಿದೆ ಇದನ್ನು ಜನರು ಸಹಿಸುವುದಿಲ್ಲ. ಆದ್ದರಿಂದ ನಾನು ಈ ಬಗ್ಗೆ ಒತ್ತಾಯ ಮಾಡುತ್ತಿದ್ದೇನೆ. ದಯಮಾಡಿ ಮಾತುಕತೆಯ ಮೂಲಕ, ಸಂಧಾನದ ಮೂಲಕ ಮಾನ್ಯ ಸಭಾ ನಾಯಕರು ತಮ್ಮ ಕೊಠಡಿಯಲ್ಲಿ ಸಭೆಯನ್ನು ಕರೆಯಬೇಕು. ಏಕೆಂದರೆ ಅನೇಕ ಪ್ರಮುಖ ವಿಷಯಗಳಿವೆ. ಜನರು ಬರಗಾಲಕ್ಕೆ ತುತ್ತಾಗಿ ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ರೈತರ ಸಾಲ ಮನ್ನಾ ಆಗದೇ ಇರುವುದರಿಂದ ಸಹಕಾರ ಸಂಘಗಳವರು ಸಾಲವನ್ನು ಬಲಾತ್ಕಾರದಿಂದ ವಸೂಲ್ಮಾಡುತ್ತಿದ್ದಾರೆ. ಇದರ ಬಗ್ಗೆ ನಮಗೆ ಸಾವಿರಾರು ಪತ್ರಗಳು ಬರುತ್ತಿವೆ. ಜಿಲ್ಲಾ ಪರಿಷತ್ತಿನ ಈ ವ್ಯವಸ್ಥೆಯ ಬಗ್ಗೆ, ಈ ತಿದ್ದುಪಡಿಯ ಬಗ್ಗೆ ಅನೇಕ ಮಂಡಲ ಪಂಚಾಯತಿಯ ಪ್ರಧಾನರು ಜಿಲ್ಲಾ ಪರಿಷತ್ತಿನ ಸದಸ್ಯರು ನಮಗೆ ಟೆಲಿಗ್ರಾಂನ್ನು ಕಳುಹಿಸಿದ್ದಾರೆ. ಅವರು ತಮ್ಮ ಪ್ರತಿಭಟನೆಯನ್ನು

ವ್ಯಕ್ತಪಡಿಸುತ್ತಿದ್ದಾರೆ. ವಿಧಾನ ಸಭೆಯಲ್ಲಿ ನೀವು ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ಕೇಳುವಂಥ ಪರಿಸ್ಥಿತಿ ಇವತ್ತು ವಿರೋಧ ಪಕ್ಷದವರಿಗೆ ಬಂದಿದೆ. ಆಡಳಿತ ಪಕ್ಷದ ಅನೇಕ ಜನ ಶಾಸಕರು ನಮ್ಮನ್ನು ಕೇಳದೆಯೇ ಈ ತಿದ್ದುಪಡಿಯನ್ನು ತಂದಿದ್ದಾರೆ, ನಾವು ಜನರ ಮುಂದೆ ತಲೆತಗ್ಗಿಸಬೇಕಾದಂಥ ಪ್ರಸಂಗ ಬಂತಲ್ಲಾ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಕಳೆದ 2–3 ದಿವಸಗಳಲ್ಲಿ ಜನರ ಅಭಿಪ್ರಾಯ ಇವರಿಗೆ ಅರ್ಥವಾಗಿದೆ. ಈ ಪರಿಸ್ಥಿತಿಯಲ್ಲಿ ನಾವು ನಮ್ಮ ಕ್ಷೇತ್ರಕ್ಕೆ ಹೋದರೆ ಅಲ್ಲಿನ ರಸ್ತೆಗಳಲ್ಲಿ ಓಡಾಡಲು ಜನರು ನಮಗೆ ಬಿಡುವುದಿಲ್ಲ. ಆದ್ದರಿಂದ ನಾನು ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಮ್ಮ ಕೊಠಡಿಯಲ್ಲಿ ಕೂತು ಏನಾದರೊಂದು ತೀರ್ಮಾನಕ್ಕೆ ಬರಬೇಕು. ಈ ಸದನದ ಕಾರ್ಯಕಲಾಪಗಳು ಪ್ರಮುಖವಾಗಿ ವಿಷಯಗಳು ಚರ್ಚೆ ಆಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ನಮ್ಮನ್ನು ಹೊರಗೆ ಹಾಕಿಸಿ ಅವರ ಕಾರ್ಯಕ್ರಮಗಳನ್ನು ಮಾಡಿಕೊಳ್ಳುವಂತೆ ಮಾಡಿ. ಈಗ 2 ದಿವಸ ವ್ಯರ್ಥವಾಗಿದೆ, ಮತ್ತೆ ಈ ಸಭೆಯ ಕಾಲವನ್ನು ವ್ಯರ್ಥಮಾಡುವುದಕ್ಕೆ ನಾವು ಇಷ್ಟಪಡುವುದಿಲ್ಲ.

†ಶ್ರೀ ಸಿ. ಬೈರೇಗೌಡ (ವೇಮಗಲ್) :– ಸನ್ಮಾನ್ಯ ಅಧ್ಯಕ್ಷರೇ ಕಳೆದ ಎರಡು ದಿವಸಗಳಿಂದ ಈ ಸದನದಲ್ಲಿ ಯಾವ ಕಾರ್ಯಕಲಾಪಗಳು ನಡೆಯುತ್ತಿಲ್ಲ; ಆದರೆ ಈ ಸದನ ನಡೆಯಬೇಕಾದರೆ ಸಾರ್ವಜನಿಕವಾದಂಥ ಹಣ ಕೂಡ ವೆಚ್ಚವಾಗುತ್ತದೆ. ಇದು ನಮಗೂ ಕೂಡ ಗೊತ್ತಿರತಕ್ಕಂಥ ವಿಚಾರ.

(ಗೊಂದಲ)

(ಮಾನ್ಯ ಸದಸ್ಯರಾದ ಚಿಕ್ಕೇಗೌಡರು ತೆಲುಗಿನಲ್ಲಿ ಗಾದೆ ಹೇಳಿದರು)

ಶ್ರೀ ಸಿ. ಬೈರೇಗೌಡ :– ಅದು ನಮಗೂ ಕೂಡ ಗೊತ್ತಿರತಕ್ಕಂಥ ವಿಚಾರ. ಮಾನ್ಯ ಚಿಕ್ಕೇಗೌಡರು ತಮಿಳುನಾಡಿನ ಪಕ್ಕದಲ್ಲಿಯೇ ಇರುವವರು. ತಮಿಳಿನಲ್ಲಿ ಏನು ಹೇಳುತ್ತಾರೆ. ಅದನ್ನು ಹೇಳಲಿ ನೋಡೋಣ. ತೆಲುಗೂ ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಈಗ ಇದು ತೆಲುಗು ತಮಿಳು ಪ್ರಶ್ನೆಯಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಇನ್ನೂ ಒಂದು ಗಾದೆ ಇದೆ. ಅದನ್ನು ಹೇಳಬಾರದು.

ಶ್ರೀ ಸಿ. ಬೈರೇಗೌಡ :– ಆದ್ದರಿಂದ ಅರಿವು ನಮಗೂ ಕೂಡ ಇದೆ. ಜನ ನಮ್ಮನ್ನು ಕಳೆದ ಎರಡು ದಿವಸಗಳಿಂದ ನೀವು ಏನು ಕೆಲಸ ಮಾಡಿದ್ದೀರೆಂದು ಕೇಳತಕ್ಕಂಥ ಪರಿಸ್ಥಿತಿ ಇದೆ. ಸಾರ್ವಜನಿಕ ಹಣ ವೆಚ್ಚವಾಯಿತೋ ಇಲ್ಲವೋ ಎಂದು ಕೇಳತಕ್ಕಂಥದ್ದಕ್ಕೆ ನಾವು ಉತ್ತರವನ್ನು ಕೊಡಬೇಕಾದರೆ ನಮಗೂ ಕಷ್ಟವಾಗುತ್ತದೆ. ಆದ್ದರಿಂದ ಮೊದಲನೆಯ ದಿವಸದಿಂದಲೇ ನಾನು ಹೇಳುತ್ತಿದ್ದೇನೆ. ಇದನ್ನು ಕುಳಿತು ಸೌಹಾರ್ದಯುತವಾದ ವಾತಾವರಣದಲ್ಲಿ ಬಗೆಹರಿಸಿಕೊಳ್ಳೋಣ ಎನ್ನುವ ಮಾತನ್ನು ಮೊದಲನೇ ದಿವಸದಿಂದಲೂ ಹೇಳುತ್ತಿದ್ದೇನೆ. ನಿನ್ನೆ ನಮ್ಮನ್ನು ಸಭೆಗೆ ಕರೆದಿದ್ದರು. ತಾವು ಕೂಡ ಆ ಸಲಹೆಗೆ ಒಪ್ಪಿದ್ದರಿ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಪ್ಪಿದ್ದರು. ನಿನ್ನೆ ನಮ್ಮನ್ನೂ ಕೂಡ ಆ ಸಭೆಗೆ ಕರೆದಿದ್ದರು. ಆ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಈ ಮಸೂದೆಯನ್ನು ಸಂಪೂರ್ಣವಾಗಿ ಅನಾಮತ್ತಾಗಿ ವಾಪಸ್ ತೆಗೆದುಕೊಳ್ಳಬೇಕೆನ್ನುವ ಪಟ್ಟನ್ನು ಅವರು ಹಿಡಿದಿದ್ದರು. ಆಗ ನಾವು ಕೆಲವು ಸ್ನೇಹಿತರು ಅವರ ಮನಸ್ಸನ್ನು ಬದಲಾಯಿಸತಕ್ಕಂಥ ಪ್ರಯತ್ನಮಾಡಿ ವಾಪಸ್ ತೆಗೆದುಕೊಳ್ಳುವ ಬದಲಾಗಿ ಜಂಟಿ ಸಲಹಾ ಸಮಿತಿಗೆ ಈ ಮಸೂದೆಯನ್ನು ಕಳುಹಿಸೋಣ, ಅಂದರು ಅವರು ಕಾಲಮಿತಿ ಬೇಕಾದರೆ ಹಾಕಲಿ; ಒಂದು ತಿಂಗಳೋ ಎರಡು ತಿಂಗಳೋ ಸಮಯ ತೆಗೆದುಕೊಂಡು ಜಂಟಿ ಸಲಹಾ ಸಮಿತಿಯು ವರದಿಯನ್ನು ಕೊಡಲಿ,

ಅದಕ್ಕೆ ಸರ್ಕಾರದವರು ಒಪ್ಪಬೇಕು ಎನ್ನುವ ಸಲಹೆಯನ್ನು ನಾವು ಕೊಟ್ಟಿದ್ದೆವು. ಅದಕ್ಕೆ ಮಾನ್ಯ ವಿರೋದಪಕ್ಷದ ನಾಯಕರಾದ ಚಂದ್ರೇಗೌಡರು ಸಹ ಒಪ್ಪಿದರು. ಆದರೆ ಅದಕ್ಕೆ ಸರ್ಕಾರದಿಂದ ಬಂದ ಉತ್ತರ ಏನೆಂದರೆ, ಅವರ ಪಕ್ಷದ ಸಹೋದ್ಯೋಗಿಗಳಿಂದಲೂ ಈ ಬಗ್ಗೆ ಸಲಹೆ ಪಡೆಯಬೇಕೆನ್ನುವ ಮಾತು ಆ ಸಭೆಯಲ್ಲಿ ಕೇಳಿಬಂತು. ಅದಕ್ಕೆ ಆಗಬಹುದೆಂದೂ ಕೂಡ ಹೇಳಿದ್ದೇವೆ. ಅವರು ಇನ್ನೂ ಒಂದು ಮಾತು ಏನು ಹೇಳಿದರೆಂದರೆ, ನಾಳೆ ನಮ್ಮ ಪಕ್ಷದ ಸಭೆಯನ್ನು ಕರೆದಿದ್ದೇವೆ. ನಮ್ಮ ಪಕ್ಷದ ಸಭೆ ನಡೆದ ನಂತರ ಈ ಬಗ್ಗೆ ನಾವು ತಿಳಿಸುತ್ತೇವೆನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತು ನಮಗೆ ಗೊತ್ತಿರುವಹಾಗೆ ಪಕ್ಷದ ಸಭೆಯನ್ನು ಕೂಡ ಅವರು ಕರೆದಿದ್ದರು. ಆದ್ದರಿಂದ ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ. ಈಗ ಹಾಲಿ ಇರತಕ್ಕಂಥ ಕಾನೂನು ಮಸೂದೆಯ ರೂಪದಲ್ಲಿದ್ದರೂ ಕೂಡ ಇದು ಜಂಟಿ ಸಲಹಾ ಸಮಿತಿಯ ಮುಂದೆ ಹೋಗಿ ಬಂದಿರೆ. ಜಂಟಿ ಸಲಹಾ ಸಮಿತಿಯ ಮುಂದೆ ಹೋಗುವುದಕ್ಕೆ ಮುಂಚೆ ಯಾವ ಸ್ವರೂಪದಲ್ಲಿ ಆಗ ಮಸೂದೆ ಇತ್ತೋ, ಜಂಟಿ ಸಲಹಾ ಸಮಿತಿಯ ವರದಿ ಪ್ರಕಾರ ಅನೇಕ ಮೂಲಭೂತವಾದಂಥ ಕೆಲವು ತಿದ್ದುಪಡಿಗಳನ್ನು ಮಾಡಿರುವಂಥದ್ದನ್ನು ಈಗಿನ ವರದಿಯಲ್ಲಿ ನಾವು ಕಂಡಿದ್ದೇವೆ. ಇವತ್ತು ಶಾಸನದಲ್ಲಿರತಕ್ಕಂಥದ್ದಕ್ಕೆ ಹೋಗುವುದಿಲ್ಲ; ಅದರ ಬಗ್ಗೆ ವಿವರವಾಗಿ ಹೇಳತಕ್ಕಂಥದ್ದು ಅನಾವಶ್ಯಕ. ಈಗ ಕೆಲವು ಮೂಲಭೂತವಾದ ತಿದ್ದುಪಡಿಗಳನ್ನು ತಂದಿದ್ದಾರೆ. ಅದರ ವಿವರಕ್ಕೆ ಹೋಗುವುದಿಲ್ಲ. ಮೂಲಭೂತವಾದ ತಿದ್ದುಪಡಿಗಳನ್ನು ತಂದಿರುವುದರಿಂದ ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕಾಗಿರತಕ್ಕಂಥದ್ದು ಮತ್ತು ಅಲ್ಲಿ ವಿವರವಾದ ಚರ್ಚೆ ಆಗಬೇಕಾದಂಥ ಅವಶ್ಯಕತೆ ಇದೆ. ಇದನ್ನು ಒತ್ತಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈಗ ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ, ಈ ಒಂದು ಆಶ್ವಾಸನೆಯನ್ನು ಕೊಡುವುದಾದರೆ ಚರ್ಚೆ ಮಾಡೋಣ ಇಲ್ಲವೇ ಪ್ರಿಲಿಮಿನರಿ ಚರ್ಚೆ ಇಲ್ಲದೆ ಜಂಟಿ ಸಲಹಾ ಸಮಿತಿಗೆ ಕಳುಹಿಸೋಣವೆಂದರೆ ಅದಕ್ಕೂ ಕೂಡ ಆಗಬಹುದು. ಇಲ್ಲವೇ ಚರ್ಚೆಮಾಡಿ ಜಂಟಿ ಸಲಹಾ ಸಮಿತಿಗೆ ಈ ಮಸೂದೆಯನ್ನು ಕಳುಹಿಸೋಣವೆಂದು ಅವರು ಒಪ್ಪುವುದಾದರೆ ಅದೂ ಕೂಡ ಆಗಬಹುದು. ಆದುದರಿಂದ ವಿರೋಧ ಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ ಇದನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡು ಹೋಗುವುದು ಬೇಡ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಇರತಕ್ಕದ್ದು ರಾಜ್ಯದ ಜನತೆಯ ಹಿತವನ್ನು ಕಾಪಾಡುವುದಕ್ಕೆ. ಅದಕ್ಕೆ ನಾವು ಖಂಡಿತ ಸಹಕಾರ ಕೊಡುತ್ತೇವೆ. ನಾನು ಆ ಒಂದು ಭಾವನೆಯಿಂದ ವಿನಂತಿಸುತ್ತಿದ್ದೇನೆ, ಈ ಒಂದು ಸಲಹೆಗೆ ಅವರು ಒಪ್ಪಲಿ; ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸುವ ತೀರ್ಮಾನ ಮಾಡಲಿ. ಅದರಿಂದ ತಡವಾಗುತ್ತದೆ, ಕಾಲ ವ್ಯಯವಾಗುತ್ತದೆಂದು ಅವರು ಹೇಳಬಹುದು. ಅದಕ್ಕೋಸ್ಕರ ಒಂದು ಅಥವಾ ಎರಡು ತಿಂಗಳ ಅವಧಿಯೊಳಗೆ ಈ ಜಂಟಿ ಸಲಹಾ ಸಮಿತಿಯು ವರದಿ ಕೊಡುವಂತೆ ನಿರ್ದೇಶನ ಕೊಡತಕ್ಕ ಅಧಿಕಾರ ಕೂಡ ಈ ಸಭೆಗೆ ಇದೆ. ಆದುದರಿಂದ ನಾನು ತಮ್ಮನ್ನು ವಿನಂತಿಸುವುದು ಮತ್ತು ಮಾನ್ಯ ನಾಯಕರಲ್ಲಿ ವಿನಂತಿಸುವುದೇನೆಂದರೆ, ಈ ಒಂದು ಸಮಸ್ಯೆ ಸೌಹಾರ್ದಯುತವಾಗಿ ಬಗೆಹರಿಯಬೇಕಾದರೆ ಈ ಸಲಹೆಯನ್ನು ಒಪ್ಪಬೇಕು. ನಮ್ಮ ಧರಣಿಯನ್ನು ವಾಪಸ್ಸು ಪಡೆಯಬೇಕೆಂಬ ಬೇಡಿಕೆ ಇದೆ; ಅದನ್ನು ಕೈಬಿಡುವುದಕ್ಕೆ ತಯಾರಿದ್ದೇವೆ. ಅದಕ್ಕೆ ವಿರೋಧ ಪಕ್ಷದ ನಾಯಕರ ಸಮ್ಮತಿಯು ಇದೆ, ನಮ್ಮ ಸಮ್ಮತಿಯು ಸಹ ಇದೆ. ಆದರೆ ಅವರು ಈಗಿರತಕ್ಕ ರೂಪದಲ್ಲೇ ಏನು ಮಸೂದೆಯನ್ನು ಪಾಸ್ ಮಾಡಬೇಕೆಂಬ ಹಠವನ್ನು ಏನು ಮಾಡುತ್ತಿದ್ದಾರೆ ಅದನ್ನು ಅವರೂ ಸಹ ಕೈಬಿಡಬೇಕು. ನಮ್ಮ ಪರವಾಗಿ ನಾವು ಈ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂಬ ಹಟವನ್ನು ಬಿಡುವುದಕ್ಕೆ ತಯಾರಿದ್ದೇವೆ. ಒಂದು ಮಧುರ ವಾತಾವರಣದಲ್ಲಿ ಇದು ಚರ್ಚೆಯಾಗಲಿ, ರಾಜ್ಯದ ಜನತೆಯ ಹಿತವನ್ನು ಕಾಪಾಡೋಣ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ದಯವಿಟ್ಟು ಇದಕ್ಕೆ ಮಾನ್ಯ ಸಭಾನಾಯಕರು ಒಪ್ಪಬೇಕೆಂದು ಅವರಲ್ಲಿ ವಿನಂತಿಸಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ನಡೆದಂತಹ ಸಭೆಯಲ್ಲಿ ಇಂಥದ್ದೇ ಒಂದು ಸಂಧಾನದ ಸೂತ್ರವನ್ನು ಸಲಹೆ ಮಾಡಿದ್ದೆ. ಪ್ರಾರಂಭದಲ್ಲಿ ಪೂರ್ವಭಾವಿಯಾಗಿ ಚರ್ಚೆ ಮಾಡಿ ಅನಂತರ ಈ ಸದನದಲ್ಲಿ ಚರ್ಚೆ ಮಾಡತಕ್ಕ ಅವಶ್ಯಕತೆ ಇಲ್ಲ, ಇಲ್ಲೇ ನೇರವಾಗಿ ಚರ್ಚೆಯನ್ನು ಪ್ರಾರಂಭಿಸಬಹುದೆಂದು ಹೇಳಿದವನು ನಾನು. ನನ್ನ ಒಂದು ಸಂಧಾನ ಸೂತ್ರವೇನೆಂದರೆ ಈ ಮಸೂದೆಯನ್ನು ನಾವು ಕೂಲಂಕುಷವಾಗಿ

ಅಧ್ಯಯನ ಮಾಡಿದರೆ ಇದು ಜಂಟಿ ಸಲಹಾ ಸಮಿತಿಗೆ ಹೋಗಲು ಯೋಗ್ಯತೆ ಇರುವಂತಹ ಒಂದು ಮಸೂದೆ. ಅಂದರೆ ದೋಷ ಇರುವಂತಹ ಮಸೂದೆ ಎಂದು ಏನು ಹೇಳುತ್ತಾರೆ. ಆದರ ಪ್ರಕಾರ It is a fit case which should be referred to the Joint Select Committee. ಎಂದು ಆದನ್ನು ನಾನು ಪದಶಃ ಭಾಷಾಂತರ ಮಾಡುತ್ತಿದ್ದೇನೆ. ಅದಕ್ಕೆ ತಾತ್ವಿಕವಾದ ಕಾರಣಗಳು ಇವೆ. ಹಾಗೆಯೇ ತಾಂತ್ರಿಕವಾದ ಕಾರಣಗಳು ಇವೆ. ನಿನ್ನೆ ಮಾನ್ಯ ಪಂಚಾಯತ್ ರಾಜ್ಯ ಮಂತ್ರಿಗಳ ಜೊತೆ ಮಾಡಿದಂತಹ ಸಭೆಯಲ್ಲಿ ಒಂದು ಮಾತು ನನ್ನ ಕಿವಿಗೆ ಬಿತ್ತು. ಬಹಳ ಅವಸರದಲ್ಲಿ ಈ ಮಸೂದೆ ಈ ಸದನದೊಳಗೆ ಬಂದಿದೆ; ಅದು ಕಾನೂನು ಇಲಾಖೆಯ ಮುಖಾಂತರ ಹಾಯ್ದು ಬಂದಿಲ್ಲ ಎಂದು ತಿಳಿಯಿತು. ನಾನು ನಿನ್ನೆ ಮಸೂದೆಯನ್ನು ಪುನಃ ಅವಲೋಕನ ಮಾಡಿ ನೋಡಿದಾಗ ಇಂಥ ತಾಂತ್ರಿಕ ದೋಷಗಳು ಬಹಳ ಇವೆ ಎಂಬುದು ಕಂಡುಬಂತು. ಈಗ ಮಸೂದೆ ನನ್ನ ಕೈಯಲ್ಲಿ ಇಲ್ಲ. ಆದರೂ ನೆನಪಿನಿಂದ ಹೇಳುತ್ತಿದ್ದೇನೆ; ತಮ್ಮ ಕೈಯಲ್ಲಿದ್ದರೆ ನೋಡಿಕೊಳ್ಳಿ. 6ನೇ ಪುಟದಲ್ಲಿ Sub-section (2) of Section-12 ಅಂಥ ಹೇಳಿ, ಡೆಪ್ಯೂಟಿ ಕಮೀಷನರ್ ಮತ್ತು ಅಸಿಸ್ಟೆಂಟ್ ಕಮೀಷನರ್‌ಗಳಿಗೆ ಅನ್ವಯವಾಗುವಂತಹ ಬದಲಾವಣೆಗಳನ್ನು ಸೂಚನೆ ಮಾಡಿದ್ದಾರೆ; If you go into the original Act, Then will find that Section-12 refers disqualification of members of Mandal Panchayats. ಇಂಥ ದೋಷಪೂರ್ಣವಾದ ಡ್ರಾಫ್ಟಿಂಗ್ ಮಾಡಿ, ಮಸೂದೆಯನ್ನು ಈ ಸದನದ ಮುಂದಿಡುವ ಕೆಲಸವನ್ನು ಯಾವುದೇ ಸರ್ಕಾರವಾಗಲಿ ಮಾಡಬಾರದು; ಆ ಕಾರಣದಿಂದ ನನ್ನ ಸಲಹೆ ಏನೆಂದರೆ, ಇವತ್ತು ನಾಳೆ ಏನು ತುರ್ತು ಕೆಲಸಗಳು ಇವೆಯೋ, ಆ ಕೆಲಸಗಳನ್ನು ಸದನ ಮಾಡಿ ಮುಗಿಸಬಹುದು; ಅನಂತರ ಈ ಸಭೆಯನ್ನು ಮುಂದೂಡಿ ಇನ್ನು 15 ದಿವಸಗಳ ನಂತರ ಆ ದೋಷಗಳನ್ನೆಲ್ಲ ತೆಗೆದು ಹಾಕಿ ಮಸೂದೆಯನ್ನು ಮತ್ತೆ ಈ ಸದನದ ಮುಂದೆ ಮಂಡಿಸಬಹುದೆಂದು ಸಲಹೆ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಸಭಾಧ್ಯಕ್ಷರೆ, ವಿರೋಧಪಕ್ಷದ ವತಿಯಿಂದ ಮತ್ತು ಇನ್ನುಳಿದ ಮಿತ್ರರಿಂದ ಕೆಲವು ಸಲಹೆಗಳು ಈಗ ಬಂದಿವೆ. ಒಂದು ಮಾತನ್ನು ಹೇಳಬೇಕಾದರೆ ನಾವು ಅವರು ಮನಗಂಡಂತೆ ಕಳೆದ ಎರಡು ದಿನದಿಂದ ಕಲಾಪಗಳನ್ನು ಈ ಸದನದಲ್ಲಿ ನಡೆಸುವುದಕ್ಕೆ ಸಾಧ್ಯವಾಗಿಲ್ಲ. ಕಾರಣಗಳ ವಿಶ್ಲೇಷಣೆ ಮತ್ತೊಮ್ಮೆ ಬೇಕಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ನಮಗೆಲ್ಲರಿಗೂ ಅದು ಗೊತ್ತಿರುವುದರಿಂದ, ಸುಮಧುರ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೋಸ್ಕರ ನಾವು ಪ್ರಯತ್ನ ಮಾಡಬೇಕು ಎಂಬ ಸಲಹೆ ಸಹ ಸ್ವಾಗತಾರ್ಹ. ನಾನೂ ಕೂಡ ಅದಕ್ಕೆ ಸ್ವಾಗತವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಮಾನ್ಯ ವಾಟಾಳ್‌ರವರು ಇದು ಪ್ರಜಾ ವಿರೋಧಿ ಮಸೂದೆ ಎಂಬ ಮಾತನ್ನು ಆಡಿದ್ದಾರೆ. ಅದು ಅವರ ಅಭಿಪ್ರಾಯ. ಮತ್ತೊಂದು ಅದಕ್ಕೆ ವಿರೋಧವಾಗಿರತಕ್ಕ ಅಭಿಪ್ರಾಯ ಇದ್ದೇ ಇರುತ್ತದೆ ಎಂಬುದನ್ನು ಅವರೂ ಮನಗಂಡಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಈಗ ತಂದಿರತಕ್ಕ ಈ ಒಂದು ಮಸೂದೆ ಪ್ರಜಾವಿರೋಧಿ ಅಲ್ಲದೆ ಪರವಾಗಿರತಕ್ಕ ಮಸೂದೆ ಎಂದು ಹೇಳುವುದಕ್ಕೆ ಕಾರಣಗಳಿವೆ ಎಂಬತಕ್ಕ ವಿಚಾರದ ವಿವರಗಳಿಗೆ ಈಗ ಹೋಗುವುದು ಬೇಡ. ಮಾತುಕತೆ ಮಾಡೋಣ ಎಂಬ ಮಾತು ಒಪ್ಪತಕ್ಕದ್ದು. ಅವರ ಸಲಹೆ ಮೆಚ್ಚತಕ್ಕದ್ದು. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ; ಇವತ್ತು ಬಹುಮತ ಇದೆ ಎಂಬ ದೃಷ್ಟಿಯಿಂದ ಪಾಸ್ ಮಾಡತಕ್ಕದ್ದು ಇಲ್ಲಿ ನಮಗೆ ಸಾಧ್ಯ ಇದೆ ಎಂಬ ಕಾರಣದಿಂದ ಮಾಡುವ ಹಾಗಿದ್ದರೆ ಆ ಪ್ರಶ್ನೆ ಪ್ರತ್ಯೇಕ. ಆದರೆ ಚರ್ಚೆ ಮಾಡಿ ಅದರಿಂದ ಉದ್ಭವವಾಗತಕ್ಕ ಒಂದು ಫಲಿತಾಂಶ ಏನಿದೆ ಅದು ಒಳ್ಳೆಯದು ಎಂಬುದು; ಚರ್ಚೆ ಮಾಡಬಹುದು ಎಂಬ ಮಾತನ್ನು ಸುಮಾರಾಗಿ ಮಾತನಾಡಿರತಕ್ಕ ಎಲ್ಲ ಮಿತ್ರರೂ ಕೂಡ ಹೇಳಿದ್ದಾರೆ. ಇವತ್ತು ಲೀಗಲ್ ಒಪೀನಿಯನ್ ಕೂಡ ಪಡೆದಿಲ್ಲ ಎಂಬ ಮಾತನ್ನು ಮಾನ್ಯ ಯಡಿಯೂರಪ್ಪ ಅವರು ಮತ್ತು ಪ್ರೊಫೆಸರ್ ನಂಜುಂಡಸ್ವಾಮಿ ಅವರು ಹೇಳಿದ್ದಾರೆ. ಶಾಸನದ ಚರ್ಚೆ ಕಾಲದಲ್ಲಿ ಆ ವಿಚಾರವನ್ನು ಹೇಳೋಣ. ನಮ್ಮ ಪ್ರಕಾರ, ಕಾನೂನು ಪ್ರಕಾರ ಏನು ಯಾವ ಅಭಿಪ್ರಾಯ ಪಡೆಯಬೇಕೋ ಅದನ್ನು ಪಡೆದಿದ್ದೇವೆ. ನಾನು ಅಷ್ಟು ಜನರಲ್ಲಾಗಿ ಹೇಳುತ್ತೇನೆ. ಈ ಮಸೂದೆ ಚರ್ಚೆಗೆ ಒಳಪಟ್ಟಾಗ ಸಹಜವಾಗಿ ತಮ್ಮ ಅಭಿಪ್ರಾಯವನ್ನು ತಾವು ವಿವರಗಳನ್ನು ಹೇಳಬೇಕಾಗುತ್ತದೆ. ನಮ್ಮ ಅಭಿಪ್ರಾಯ ಕೂಡ ನಾವು ಹೇಳತಕ್ಕ ಸಂದರ್ಭ ಬಂದಾಗ ಆ ವಿಚಾರದ ಬಗ್ಗೆ ನಾವೂ ಕೂಡ ಹೇಳೋಣ. ಮೈಸೂರಿನಲ್ಲಿ ಚಳುವಳಿ ಮಾಡಿದ್ದಾರೆ, ಕೆಲವರು ರಾಜೀನಾಮೆ ಕೊಟ್ಟಿದ್ದಾರೆ ಎಂಬ ಮಾತು ಹೇಳಿದ್ದಾರೆ. ಪತ್ರಿಕೆಯಲ್ಲಿ ಕೂಡ

ಆದು ಬಂದಿದೆ. ನಮ್ಮ ಕಾಂಗ್ರೆಸ್ಸಿನವರೂ ಕೂಡ ಸೇರಿ ಅಲ್ಲಿ ರಾಜೀನಾಮೆ ಕೊಡತಕ್ಕ ವಿಚಾರಕ್ಕೆ ಹೋಗಿದ್ದಾರೆ ಎಂಬ ಮಾತು. ಅದು ಯಾರು ಏನು ಎನ್ನತಕ್ಕ ವಿವರಗಳನ್ನು ನಂತರ ನಾವು ನೋಡೋಣ. ಹೋಗಿದ್ದಾರೋ ಇಲ್ಲವೋ...

ಶ್ರೀ ವಾಟಾಳ್ ನಾಗರಾಜ್ :– ನಿರ್ಣಯದ ಕಾಪಿ ಇದೆ, ತಮಗೆ ಕಳುಹಿಸಿಕೊಡುತ್ತೇನೆ, ತಾವು ಬೇಕಾದರೆ ನೋಡಿ. ನಿಮ್ಮ ಪಕ್ಷದ ಮುಖಂಡರಾದ ಶ್ರೀ ಎಚ್.ಸಿ. ಬಸವರಾಜು ಅವರು ಮಂಡಿಸಿದ ನಿರ್ಣಯ ಇದು. ತಮ್ಮ ಪಕ್ಷದವರೇ ವಿರೋಧಪಕ್ಷದ ನಾಯಕರಾಗಿದ್ದಾರೆ. ಅವರೇ ಮಂಡಿಸಿದ ನಿರ್ಣಯ. ತೆಗೆದುಕೊಳ್ಳಿ ಕಾಪಿ.

(ಗೊಂದಲ)

ಶ್ರೀ ಜೆ. ರಾಜುಗೌಡ :– ಅದು ಅಧಿಕೃತವಾದುದಲ್ಲ. ಅಧಿಕೃತವಾದುದು ನನ್ನ ಹತ್ತಿರ ಇದೆ.

ಶ್ರೀ ವಾಟಾಳ್ ನಾಗರಾಜ್ :– ವಿರೋಧಪಕ್ಷದ ನಾಯಕರಾದ ಹೆಚ್. ಸಿ. ಬಸವರಾಜ್ ಅವರೇ ಮಂಡಿಸಿರತಕ್ಕ ಅಧಿಕೃತವಾದ ನಿರ್ಣಯ ಇದು. ಇದರಲ್ಲಿ ಬೇರೆ ಏನೂ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :– ಈ ಆಕ್ಟ್‌ನಲ್ಲಿ ಯಾರು ಯಾರು ಬೆನಿಫಿಟ್ ಹೊಡೆದವರಿದ್ದಾರೋ ಹಾಗೂ ಪ್ರಯೋಜನ ಆಗಿದೆಯೋ ಅವರೆಲ್ಲಾ ಪಾರ್ಟಿ ಮರೆತು ರಾಜೀನಾಮೆ ಕೊಟ್ಟರೆ ಆಶ್ಚರ್ಯವೇನಲ್ಲ.

ಶ್ರೀ ಸಿ. ಬೈರೇಗೌಡ :– ಈಗ ಪುನಃ ನೀವು ಅದೇ ಪ್ರಯೋಜನ ಪಡೆಯಬೇಕೆಂದು ಹೊರಟಿದ್ದೀರಿ. ಪಡೆಯಿರಿ; ನಾವು ಬೇಡ ಅನ್ನುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೇ, ಈಗ ನಾನು ಹೇಳುವುದು ಇಷ್ಟೇ. ರಾಜೀನಾಮೆ ಕೊಟ್ಟವರು ಯಾರು ಏನು? ನಿನ್ನೆ ನನ್ನನ್ನು ಬಂದು ಕಂಡಿಲ್ಲ ಎಂದಲ್ಲ. ಅಲ್ಲಿಯ ಜಿಲ್ಲಾಪರಿಷತ್ ಅಧ್ಯಕ್ಷರು ವೃಷಬೇಂದ್ರಪ್ಪ ಎನ್ನುವವರು ಬಂದಿದ್ದರು. ಇಲ್ಲಿ ಹೆಸರು ಹೇಳತಕ್ಕ ಅವಶ್ಯಕತೆ ಇಲ್ಲ. ಅವರು ನಿನ್ನೆ ನಮ್ಮನ್ನು ಕಂಡರು. ಸಂಪುಟದ ಸಭೆ ಆದಮೇಲೆ ಅವರು ಬಂದು ಈ ರೀತಿ ನಮಗೆ ಅನ್ಯಾಯ ಆಗುತ್ತಿದೆ, ಇತ್ಯಾದಿ ಇತ್ಯಾದಿ ವಿಚಾರಗಳನ್ನು ಅವರು ಹೇಳಿದರು. ನಮ್ಮ ಕಾಂಗ್ರೆಸ್ ಸದಸ್ಯರೂ ಕೂಡಾ ಇದರಲ್ಲಿ ಸೇರಿದ್ದಾರೆಂದು, ಅನಂತರ ಅಲ್ಲಿಯ ಕಾಂಗ್ರೆಸ್ ಸ್ಥಾನಿಕ ಸಮಿತಿಯ ಅಧ್ಯಕ್ಷರು ಇತ್ಯಾದಿ, ಇತ್ಯಾದಿ ಅಂದರೆ ಯುವ ಕಾಂಗ್ರೆಸ್ ಅಧ್ಯಕ್ಷರು ಎಂದು ಹೇಳುತ್ತಿದ್ದರು. ಆದರೆ ಅವರು ಯಾರು ಏನೆಂದು ನನಗೆ ಪರಿಚಯ ಇರಬೇಕಲ್ಲವೇ, ನನಗೆ ಗೊತ್ತಿಲ್ಲ ಅದು.ಒಟ್ಟಾಗಿ ಅವರು ಹೇಳಿದ್ದಾರೆ. ಅದರ ಬಗ್ಗೆ ಅವರು ಜನರಲ್ಲಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ಎಲ್ಲರೂ ಸೇರಿ ರುಜು ಮಾಡಿಲ್ಲ. ವೃಷಬೇಂದ್ರಪ್ಪ ಅವರು ಮಾತ್ರ ರುಜು ಮಾಡಿರುವುದು. ಅವರೂ ಕೂಡಾ ಕಾಂಗ್ರೆಸ್‌ನವರು ಅಲ್ಲ. ಅವರೂ ಕೂಡಾ ಒಂದು ಪತ್ರವನ್ನು ನನಗೆ ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನು ಇಲ್ಲಿ ಹೇಳಿದ್ದೇನೆ. ಈ ಸಂದರ್ಭದಲ್ಲಿ ಆ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಯಾರು ಏನು ವಿವರಕ್ಕೆ ಅನಂತರ ಹೋಗೋಣ. ಅದರ ಅರ್ಥ ಏನೆಂದರೆ ಬರೀ ವಿರೋಧ ಪಕ್ಷದವರು ಅಷ್ಟೇ ವಿರೋಧ ಮಾಡುತ್ತಿಲ್ಲ, ಕಾಂಗ್ರೆಸ್‌ನವರೂ ವಿರೋಧ ಮಾಡುತ್ತಿದ್ದಾರೆಂದು ಹೇಳುವುದಕ್ಕೋಸ್ಕರ, ಉದಾಹರಣೆಗೆ ತಾವು ಹೇಳಿದ್ದೀರಿ. ಇಲ್ಲಿ ಅಭಿಪ್ರಾಯಗಳು ಸುಮಾರು ನಮಗೂ ಕೂಡಾ ಬಂದಿವೆ. ಬೇರೆ ಕಡೆ ಕೂಡಾ ಬಂದಿವೆ. ಅದರ ಆಧಾರರ ಮೇಲೆ, ಈ ಮಸೂದೆ ಬಗ್ಗೆ ವಿವರಕ್ಕೆ ನಾನು ಹೋಗುತ್ತಿಲ್ಲ. ಒಂದು ಮಸೂದೆಯನ್ನು ತರಬೇಕಾದರೆ ಅಭಿಪ್ರಾಯ ಭಿನ್ನವಾಗಿ ಒಂದೇ ಪಕ್ಷದಲ್ಲಿ ಇರುವಂತಹ ಸಂದರ್ಭಗಳು ಇವೆ ಎನ್ನುವ ವಿಷಯವನ್ನು ನಾನು ಮೊದಲೇ ಆಡಿದ್ದೇನೆ. ಇವತ್ತು ಈ ಕಾನೂನು ತರಬೇಕಾದರೆ ಎಲ್ಲರೂ ನಿಮ್ಮ ಪರವಾಗಿ ನೂರಕ್ಕೆ ನೂರರಷ್ಟು ಕೆಲವು ಕಲಂಗಳ ಬಗ್ಗೆ ಇದ್ದರು ಎಂದು ಅರ್ಥವಲ್ಲ. ಸಹಜವಾಗಿ ಪರ ಹಾಗೂ ವಿರೋಧ ತಮ್ಮ ಕಾಲದಲ್ಲೂ ಇತ್ತು. ನಮ್ಮ ಕಾಲದಲ್ಲೂ ಕೂಡ ಇದ್ದಾವೆ. ಹಾಗೆ ಬಂದರೆ ಇಡೀ ಕಾಂಗ್ರೆಸ್ ಪಕ್ಷ ಇದಕ್ಕೆ ವಿರೋಧ ಆಗಿದೆ ಎನ್ನತಕ್ಕ ಅಭಿಪ್ರಾಯಕ್ಕೆ ತಾವು ಹೋಗಬಾರದು ಎಂದು ಈ ಮಾತನ್ನು ಆಡಿದ್ದೇನೆ. ಇದನ್ನು ತಾವು ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ಆದೇ ರೀತಿ ತಾವು ಈ ಮಸೂದೆಯನ್ನು ವಿರೋಧ ಮಾಡುತ್ತೀರಿ ಎಂದ ತಕ್ಷಣ ತಮ್ಮ ಪಕ್ಷದಲ್ಲಿ ಇರುವ ಎಲ್ಲ ಕಾರ್ಯಕರ್ತರು, ಎಲ್ಲಾ ಸದಸ್ಯರು, ಸಂಪೂರ್ಣವಾಗಿ ವಿರೋಧಿಗಳಾಗಿದ್ದಾರೆಂದು ತಿಳಿದುಕೊಳ್ಳಬಾರದು. ಏಕೆಂದರೆ ಮುಂದಿನ ದಿನಗಳಲ್ಲಿ ಏನೇನು ಅಲ್ಲಿ ನಡೆಯುತ್ತದೆ ಎನ್ನತಕ್ಕದ್ದರ ಮೇಲೆ ನಿಂತಿರುತ್ತದೆ. ಅಷ್ಟಕ್ಕೆ ಮಾತ್ರ ಸೀಮಿತ ಮಾಡಿ ನಾನು ಈ ಮಾತನ್ನು ಆಡುತ್ತೇನೆ. ಸಭಾಧ್ಯಕ್ಷರೇ, ಇಲ್ಲಿ ಅಧಿಕಾರಕ್ಕೋಸ್ಕರ, ಬಹುಮತ ಇದೆ ಎಂದು ಆ ದೃಷ್ಟಿಯಿಂದ ನಾವು ಇದನ್ನು ಜಾರಿ ಮಾಡುತ್ತೇವೆಂದು ಎನ್ನುವ ಅಭಿಪ್ರಾಯಕ್ಕೆ ನಾನು ಹೋಗಿ, ಅಧಿಕಾರವನ್ನು ಪಡೆಯಬೇಕು ಎನ್ನತಕ್ಕ ವಿಚಾರಕ್ಕೆ

1.30 ಪಿ.ಎಂ.

ನಾವು ಹೋಗಿದ್ದೇವೆ ಎನ್ನತಕ್ಕ ವಿಚಾರ ಯಾರೇ ಮಾಡಿದರೂ ಸಹ ಮತ್ತೊಂದು ಅಭಿಪ್ರಾಯಕ್ಕೂ ಬರುತ್ತೇವೆ. ಅಧಿಕಾರ ಇದ್ದದ್ದು ಅಲ್ಲಿ ಕೆತ್ತುಕೊಂಡು ಹೋಗುತ್ತಾರಲ್ಲಾ ಎಂಬ ನೋವಿನಿಂದ ಕೂಡಾ ಕೆಲವರು ಅದನ್ನು ಮಾಡುತ್ತಿದ್ದಾರೆ ಎನ್ನುವ ಅಭಿಪ್ರಾಯಕ್ಕೆ ಕೂಡಾ ನಾವು ಬರತಕ್ಕ ಸಂದರ್ಭಗಳು. ಅದಕ್ಕೇ ಹೇಳುವುದು, ನಾವು ಮಾತನಾಡಬೇಕಾದರೆ ಒಂದು ಅಭಿಪ್ರಾಯವನ್ನು ಮಂಡನೆ ಮಾಡಿಬಿಟ್ಟರೆ ಮತ್ತೊಂದು ವಾದವನ್ನು ಮತ್ತೊಂದು ಅಭಿಪ್ರಾಯದ ಜೊತೆಗೆ ಇಡತಕ್ಕ ಸಂದರ್ಭ ಇದೆ. ನಾನು ಅಷ್ಟಕ್ಕೆ ಸೀಮಿತವಾಗಿ ಹೇಳಿದ್ದೇನೆ. ಅನಂತರ ಜನತಾ ಪಕ್ಷದ ಮಿತ್ರರಾದ ಬೈರೇಗೌಡರು ಹೇಳಿದ್ದಾರೆ. ನಾವು ಈ ಒಂದು ಮಸೂದೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆನ್ನುವ ಪೂರ್ವಭಾವಿ ಬೇಡಿಕೆಯನ್ನು ನಾವು ಮೊದಲು ಇಟ್ಟರೂ ಕೂಡಾ ನಾವು ಅದನ್ನು ಕೈಬಿಟ್ಟಿದ್ದೇವೆ ಎನ್ನುವ ಮಾತು. ಅದರ ಬದಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಲುಹಿಸತಕ್ಕ ಸಂದರ್ಭ ಬಂದಾಗ, ಚರ್ಚೆ, ಬೇಕಾದರೆ ಮಸೂದೆಯ ಮೇಲೆ ಪ್ರಾರಂಭವಾಗಲಿ. ಆ ಸಂದರ್ಭದಲ್ಲಿ ಜಂಟೀಸಲಹಾ ಸಮಿತಿಗೆ ಕಳುಹಿಸತಕ್ಕ ಸಂದರ್ಭ ಅಥವಾ ಒತ್ತಡವನ್ನು ನಾವು ಮಾಡುತ್ತೇವೆ. There is nothing wrong in it in asking in that fashion. ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ಪೂರ್ವಭಾವಿಯಾಗಿ ಈ ಮಸೂದೆಯನ್ನು ಕೈಬಿಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ನೀವು ಕೈಬಿಟ್ಟಿದ್ದೇವೆಂದು ಹೇಳುವುದಕ್ಕೋಸ್ಕರ ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ನಿಮ್ಮ ಬೇಡಿಕೆ ಮೂಲಭೂತವಾಗಿ ಅದು ಇತ್ತು. ಮಸೂದೆಯನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ ಎನ್ನತಕ್ಕ ಒತ್ತಡವನ್ನು ನೀವು ಮಾಡುವುದಿಲ್ಲ. ಒತ್ತಾಯ ಮಾಡದಿರುವುದು ಸ್ವಾಗತಾರ್ಹ, ಆ ವಿಚಾರಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜಂಟೀ ಸಲಹಾ ಸಮಿತಿಗೆ ಹೋಗಬೇಕಾದ ವಿಚಾರದಲ್ಲಿ ಈವೊಂದು ಮಸೂದೆಯ ಮೇಲೆ ಚರ್ಚೆ ಪ್ರಾರಂಭವಾದ ಮೇಲೆ, ಈ ಮಸೂದೆ ಚರ್ಚೆಗೆ ಒಳಪಟ್ಟಾಗ ನಾವು ಜಂಟೀ ಸಲಹಾಸಮಿತಿಗೆ ಒತ್ತಾಯ ಮಾಡುತ್ತೇವೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಮಾನ್ಯ ಯಡಿಯೂರಪ್ಪನವರು ಸಹ ಹೇಳಿದರು ಎಂದು ಕಾಣುತ್ತದೆ. ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯರು ಈ ಮಾತನ್ನು ಹೇಳಿದ್ದಾರೆ. ಅವರು ಜಂಟಿ ಸಲಹಾಸಮಿತಿಗೆ ಹೋಗುವುದು ಯೋಗ್ಯವೆನ್ನುವ ಮಾತನ್ನು ಹೇಳಿದ್ದಾರೆ. ಹಾಗೆ ಹೇಳುವ ಸಂದರ್ಭದಲ್ಲಿ ಈ ಮಸೂದೆಯಲ್ಲಿ ಅನೇಕ ದೋಷಗಳಿಂದ ಕೂಡಿದೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಮಾನ್ಯ ಬೈರೇಗೌಡರು ಹೇಳುವ ಪ್ರಕಾರ ಜಂಟಿ ಸಲಹಾ ಸಮಿತಿಗೆ ಹೋಗುವುದಕ್ಕೆ ಮೊದಲು ಚರ್ಚೆ ಪ್ರಾರಂಭವಾಗಲಿ, ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವರು ಒಪ್ಪಿಗೆ ಕೊಟ್ಟಿದ್ದಾರೆಂದು ನನ್ನ ಭಾವನೆ.

ಶ್ರೀ ಸಿ. ಬೈರೇಗೌಡ : ತಾವು ಜಂಟಿ ಸಲಹಾ ಸಮಿತಿಗೆ ಕಳುಹಿಸತಕ್ಕ ಒಂದು ಆಶ್ವಾಸನೆಯನ್ನು ಕೊಟ್ಟರೆ ಆಗ ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಹಾಗೂ ಚರ್ಚೆಯಾಗುವುದಕ್ಕೆ ಅಡ್ಡಿಯಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರ ಜೊತೆ ಮಾತನಾಡುವಾಗ ಈ ಸಲಹೆಯನ್ನು ಇಟ್ಟಿದ್ದೇವೆ.

ಶ್ರೀ ಸಿ. ಬೈರೇಗೌಡ : ಅಲ್ಲಿ ಸಭೆ ಸೇರಿದ್ದಾಗ ಮಾನ್ಯ ಚಂದ್ರೇಗೌಡರ ಆದಿಯಾಗಿ ನಾವೆಲ್ಲರೂ ಹೇಳಿರತಕ್ಕ ಮಾತು ಅದು. ನಾವು ಹೇಳುವುದನ್ನು ಸ್ವಲ್ಪ ಸರಿಯಾಗಿ ಅರ್ಥ ಬರುವ ರೀತಿಯಲ್ಲಿ ಅರ್ಥೈಸಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ತಾವು ಹೇಳಿದ್ದು ಸಂಪೂರ್ಣ ಅರ್ಥವಾಗದಿದ್ದರೂ, ನಿಮ್ಮನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ನನಗಿದೆಯೆಂದು ನೀವು ತಿಳಿದುಕೊಂಡಿದ್ದೀರಿ ಎಂದು ನಾನು ಭಾವಿಸುತ್ತೇನೆ. ಆದರೂ ತಪ್ಪಾಗಿದ್ದರೆ ನಾನು ತಿದ್ದಿಕೊಳ್ಳುವುದಕ್ಕೆ ಸಿದ್ದನಿದ್ದೇನೆ. ನಾವು ಮನುಷ್ಯರಾದುದರಿಂದ ವ್ಯತ್ಯಾಸ ಸಾಂದರ್ಭಿಕವಾಗಿ ಬರತಕ್ಕ ಪ್ರಸಂಗಗಳು ಇರುವುದರಿಂದ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ನಾನು ತಯಾರು ಇದ್ದೇನೆ. ತಾವು ಕೂಡ ರೆಡಿ ಇದ್ದೀರಿ ಎಂದು ನಾನು ಭಾವಿಸುತ್ತೇನೆ. ನಾನು ಹೇಳುವುದು ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆಂದು ನನ್ನ ಭಾವನೆ. ತಾವು ಹೇಳುವ ಮಾತು ಜಂಟಿ ಸಲಹಾ ಸಮಿತಿಗೆ ಕಳುಹಿಸುವ ಒಪ್ಪಿಗೆಯನ್ನು ಕೊಟ್ಟರೆ ಒಂದೆರಡು

ತಿಂಗಳುಗಳಲ್ಲಿ ಅವರ ವರದಿಯನ್ನು ಪಡೆದು ಅನಂತರ ಚರ್ಚೆಗೆ ಈ ಸದನಕ್ಕೆ ಬರಬಹುದು ಎನ್ನುವುದು ಒಂದು ಸಲಹೆ. ಇಲ್ಲವೆಂದರೆ ಮತ್ತೊಂದು ಅಭಿಪ್ರಾಯ ಚರ್ಚೆಗೆ ತೆಗೆದುಕೊಂಡ ಮೇಲೆ, ಅದನ್ನು ನಾವು ಹೇಳಲಿಲ್ಲವೆಂದು ಹೇಳುತ್ತೀರಿ, ನಾನು ಅದನ್ನು ಕೈ ಬಿಡುತ್ತೇನೆ. ಒಂದು ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡ ಮೇಲೆ ಆ ಸಲಹೆ ಬಂದರೆ, ಜಂಟಿ ಸಲಹಾಸಮಿತಿಗೆ ಕಳುಹಿಸಬೇಕೆನ್ನುವ ಅಭಿಪ್ರಾಯ, ತಾವು ಹೇಳದಿದ್ದರೂ ಕೂಡ ಒಂದು ಅಭಿಪ್ರಾಯ ಮಾಡುವುದಕ್ಕೆ ಸಾಧ್ಯತೆ ಇದೆ. ಅದು ಏನೇ ಇರಲಿ, ಬಿಲ್ ಚರ್ಚೆಯಾಗಲಿ ಎನ್ನತಕ್ಕ ಮಾತನ್ನು ನೀವು ಹೇಳಿದ್ದೀರಿ. ಸ್ವಾಗತ ಮಾಡತಕ್ಕ ಮಾತನ್ನು ಹೇಳಿದ್ದೀರಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾವಾಗ ಚರ್ಚೆಗೆ ಬರುತ್ತದೆ ಆಗ ಮಾತ್ರ ಈ ಪ್ರಶ್ನೆ ಬರುತ್ತದೆ. ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದ್ದು ಒಂದು ಸಂಧಾನದ ಸೂತ್ರವನ್ನು ಕಂಡುಹಿಡಿಯಬೇಕೆಂದು ಹೇಳಿದ್ದಾರೆ. ಬೇರೆಯವರು ಹೇಳಿದ್ದಾರೆ. ನೀವೂ ಒಪ್ಪಿದ್ದೀರಿ. ನಾವು ಕೂಡ ಧರಣಿ ಮಾಡುವ ಸಂದರ್ಭದಲ್ಲಿ ಸನ್ನಿವೇಶಗಳು ಪ್ರಜಾಪ್ರಭುತ್ವದ ಸ್ಥಿತಿಯಲ್ಲಿ ನಾವು ಒಪ್ಪಿಕೊಂಡು ಬಂದಿರತಕ್ಕ ಸೂತ್ರಗಳು ಎನ್ನತಕ್ಕ ಭಾವನೆಯ ಮಾತನ್ನು ಅವರು ಆಡಿದ್ದಾರೆ. ಈ ಸಂದರ್ಭದಲ್ಲಿ ನಂಜುಂಡಸ್ವಾಮಿಯವರು ಹೇಳಿದ್ದು ಇಂದು ಮತ್ತು ನಾಳೆ ಏನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಇರತಕ್ಕ ವಿಷಯಗಳು ಇವೆ, ಅವುಗಳನ್ನು ಚರ್ಚೆ ಮಾಡೋಣ. ಈ ಮಸೂದೆಯ ಚರ್ಚೆಯನ್ನು ನಾವು ಮುಂದಕ್ಕೆ ಹಾಕಿಕೊಳ್ಳೋಣವೆಂದು, ಮಸೂದೆಯ ಬಗ್ಗೆ ಭಿನ್ನವಾದ ಅಭಿಪ್ರಾಯಗಳು ಬರಬಹುದು ಎನ್ನತಕ್ಕ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ಚರ್ಚೆಯ ಕಾಲದಲ್ಲಿ ವಿಭಿನ್ನ ಸಲಹೆಗಳು ಬರುತ್ತವೆ. including making a suggestion to refer it to the Joint Select Committee, for the sake of argument ಎಂದು ನಾವು ಇಟ್ಟುಕೊಳ್ಳೋಣ, ಇಷ್ಟು ಮಾತುಗಳು ಈಗ ಬಂದಿವೆ. ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಈ ಕೆಲವು ಬದಲಾವಣೆ ಆಗಿರತಕ್ಕಂಥ ಸಂದರ್ಭದ ಹಿನ್ನೆಲೆಯಲ್ಲಿ ಸಲಹೆಗಳು ಏನು ಬಂದಿವೆ, ಇದರ ಹಿನ್ನೆಲೆಯಲ್ಲಿ ಅಧ್ಯಕ್ಷರ ಅನುಮತಿ ಪಡೆದು ಒಂದೆರಡು ವಿಷಯಗಳನ್ನು ಸರ್ಕಾರದ ಪರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಹಜವಾಗಿ ಇಂತಹ ಸಂದರ್ಭಗಳು ಬರುತ್ತವೆ. ಪ್ರಾಮುಖ್ಯವಾಗಿ ಇಂತಹ ಮಸೂದೆಗಳು ಚರ್ಚೆಗೆ ಒಳಪಡತಕ್ಕಂಥ ಸಂದರ್ಭದಲ್ಲಿ ವಿಭಿನ್ನವಾಗಿ ಕೆಲವೊಮ್ಮೆ ಬಹಳ ಆಳವಾದಂಥ ವಿಭಿನ್ನತೆ ಬರತಕ್ಕದ್ದು ಸಹಜವಾದುದು. ಈ ಸಹಜತೆಯನ್ನು ಮನಗಂಡೇ ನಾನು ಈ ಮಾತನಾಡುತ್ತಿದ್ದೇನೆ. ನಾವು ಎರಡು ದಿವಸದಿಂದ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಆಗಲಿಲ್ಲ. ನಿಜ ಹೇಳಬೇಕೆಂದರೆ, ಏನು ನಡೆಸಬೇಕಾಗಿತ್ತು ಅದನ್ನು ನಡೆಸುವುದಕ್ಕೆ ಆಗಲಿಲ್ಲ. ಬರಗಾಲ ಇತ್ಯಾದಿ ವಿಷಯಗಳು ನಮ್ಮ ಕಲಾಪಗಳ ಪಟ್ಟಿಯಲ್ಲಿ ಇವೆ. ಇಂತಹ ಸಂದರ್ಭದಲ್ಲಿ ಈ ಒಂದು ಮಸೂದೆ ಬಗ್ಗೆ ಚರ್ಚೆಯಾಗಬೇಕು ಎಂಬ ಉದ್ದೇಶದಿಂದಲೇ ನಾವು ಈ ಮಸೂದೆಯನ್ನು ಸದನದ ಒಪ್ಪಿಗೆಗೋಸ್ಕರ, ಚರ್ಚೆಗೋಸ್ಕರ ಮಂಡನೆ ಮಾಡಿದ್ದು. ಇಲ್ಲಿ ಯಾವಾಗ ತೆಗೆದುಕೊಳ್ಳಬೇಕು ಏನು ಅಂತ ಒಂದು ಸಲಹೆಯನ್ನು ತಾವು ಮಾಡಿದ್ದೀರಿ. ಅದರ ಬಗ್ಗೆ ಹೇಗೆ ಎನ್ನುವ ವಿಚಾರ ಅಧ್ಯಕ್ಷರಿಗೆ ನಾವು ಬಿಡೋಣ. ನಾನು ಅದಕ್ಕೆ ಅಡ್ಡ ಬರಬೇಕು ಎನ್ನುವ ವಿಚಾರದಿಂದ ನಾನು ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಜನತೆಯ ಕ್ಷಮೆಯನ್ನು ನಾವು ಕೋರತಕ್ಕಂಥ ಸಂದರ್ಭ ಇದೆ. ಏಕೆಂದರೆ ಎರಡು ದಿನಗಳ ಕೆಲಸ ಕಾರ್ಯಗಳು ನಡೆದಿಲ್ಲ. ಅವರ ಹಣ ಇಲ್ಲಿ ಖರ್ಚಾಗಿದೆ. ಈ ಹೊಣೆಗಾರಿಕೆಯನ್ನು ಇವತ್ತು ಯಾರೋ ಒಬ್ಬರ ಮೇಲೆ ಹೊರಿಸಬೇಕು ಎಂಬ ಭಾವನೆಯಿಂದ ನಾನು ಮಾತನಾಡುತ್ತಿಲ್ಲ. That is not at all my point. ಆದರೆ ಅವರ ಕ್ಷಮೆಯನ್ನು ಕೇಳಬೇಕಾದ ಸಂದರ್ಭವಂತೂ ಈಗ ಬಂದಿದೆ ಎಂದು ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಇಂದು ಮತ್ತು ನಾಳೆ ನಾವು ನಮ್ಮ ಕಾರ್ಯಕಲಾಪಗಳನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಮುಂದುವರೆಸೋಣ. ಬರಗಾಲ, ಇತ್ಯಾದಿ ವಿಷಯಗಳಿವೆ. ಅನಂತರ ಹಣಕಾಸು ವಿನಿಯೋಗದ ಮಸೂದೆ ಪಾಸ್ ಆಗಬೇಕು ಇಲ್ಲಿ ಆದಮೇಲೆ ವಿಧಾನ ಪರಿಷತ್ತಿನಲ್ಲಿ ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆಗಬೇಕು. ಸುಮಾರಾಗಿ ತಾವು ಇಲ್ಲಿ ಕುಳಿತಿದ್ದಾಗ ನಾವು ಅಲ್ಲಿ ಕುಳಿತುಕೊಂಡು ಅಪ್ರೊಪ್ರಿಯೇಶನ್ ಬಿಲ್‌ಗೆ ನಾವು ಯಾವಾಗಲೂ ತೊಂದರೆ ಕೊಟ್ಟಿಲ್ಲ. ತಾವು ಕೂಡ ತೊಂದರೆ ಕೊಡುವುದಕ್ಕೆ ಸಿದ್ಧರಾಗಿಲ್ಲವೆಂದು ನನಗೆ ಗೊತ್ತಿದೆ. ಅಪ್ರೊಪ್ರಿಯೇಶನ್ ಬಿಲ್‌ಗೆ ಯಾವಾಗಲೂ ತೊಂದರೆಯನ್ನು ಮಾಡುವುದಿಲ್ಲ. ಏಕೆಂದರೆ ಹಣ ಖರ್ಚಾಗಲೇಬೇಕು. ಯಾವ ಸರ್ಕಾರ ಇದ್ದರೂ ಕೂಡ ಸಂಭಳ ಸಾರಿಗೆಗಳನ್ನು ಕೊಡಬೇಕು, ಪ್ರಗತಿಪರ ಕಾರ್ಯಕ್ರಮಗಳು ರಾಜ್ಯದಲ್ಲಿ ನಡೆಯಬೇಕು. There can never be no second

opinion on that. ಅನ್ನತಕ್ಕಂಥ ವಿಚಾರದಲ್ಲಿ ಈ ಮಾತನ್ನು ಆಡಿದ್ದೇನೆ. ಬಹುಮತ ಇದ್ದು ಮತ್ತೊಂದು ಇದ್ದು ಪಾಸ್ ಮಾಡತಕ್ಕಂಥ ವಿಚಾರಧಾರಣೆಗೆ ನಾವು ಬದ್ಧರಾಗಿದ್ದಿದ್ದರೆ ಅದು ಹೋಗತಕ್ಕಂಥ ರೀತಿನೀತಿ ಮಾಡತಕ್ಕಂಥ ಚಿಂತನೆ ಬೇರೆ ದಿಶೆ ಅಥವಾ ದಾರಿಯನ್ನು ಹಿಡಿಯುತ್ತಿತ್ತು. ಆ ಉದ್ದೇಶ ನಮಗಿಲ್ಲ. ಇವತ್ತು ಬಹುಮತ ಆಧಾರದಮೇಲೆ ನಾವು ಒಂದು ತೀರ್ಮಾನ ಮಾಡಬೇಕು ಎನ್ನತಕ್ಕಂಥ ಚಿಂತನೆಯ ಹಿನ್ನಲೆಯಲ್ಲಿ ವೇಗವನ್ನು ಹಾಕಿಕೊಳ್ಳುವುದಕ್ಕೆ ತೀರ್ಮಾನ ಮಾಡುವುದಕ್ಕೆ ನಮಗೆ ಸಾಧ್ಯವಿದ್ದರೂ ಕೂಡ ಒಂದು ಸೆಕೆಂಡ್ ಕೂಡ ನಾವು ಇದರ ಬಗ್ಗೆ ಯೋಚನೆ ಮಾಡಿಲ್ಲ ಎಂಬುದನ್ನು ತಾವು ಒಪ್ಪುತ್ತೀರೆಂದು ನನ್ನ ಭಾವನೆ. ಏಕೆಂದರೆ ಇಲ್ಲಿಯವರೆಗೆ ಹಾಕಿಕೊಂಡಿರತಕ್ಕಂಥ ನಮ್ಮ ಕಾರ್ಯಕಲಾಪಗಳ ಹಿನ್ನೆಲೆಯಲ್ಲಿ ತಾವು ನೋಡಿದ್ದೀರಿ. ಇದರ ಅರ್ಥ ಏನು? ಈ ಒಂದು ಮಸೂದೆ ಬಗ್ಗೆ ಚರ್ಚೆ ಮಾಡುವುದಕ್ಕೆ ಕೆಲವು ಕಾಲ ಇವತ್ತು ನಿಮಗೆ ಹೇಗೆ ಬೇಕು ಎಂದು ಹೇಗೆ ಹೇಳುತ್ತೀರೋ, ಆಲ್‌ರೈಟ್, ನಾವು ಕೂಡ ಸಿದ್ಧರಾಗಿದ್ದೇವೆ ಎನ್ನುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಮಾತನ್ನು ನಾನು ಆಡಿದ್ದೇನೆ. Let us be very very plain about this one. ತಪ್ಪೇನೂ ಆಗುವುದಿಲ್ಲ. ಆದರೆ ಎಷ್ಟು ದಿವಸ ಕಾಲ ಹೋಗಬೇಕು ಎನ್ನುವ ವಿಚಾರ. ಅದು ಬಹಳ ದಿವಸಗಳವರೆಗೆ ಇದು ಹೋಗಬಾರದು ಎಂಬುದನ್ನು ನಮ್ಮ ಅಭಿಪ್ರಾಯ. ಆದರೆ ನಾವು ಬಹಳ ದಿವಸಗಳಿಗೆ ಮುಂದೂಡಬೇಕೆಂದು ಅಭಿಪ್ರಾಯ ನಿಮಗೆ ಇಲ್ಲದಿದ್ದರೂ ಕೂಡ ಅದು ತತ್‌ಕ್ಷಣ ಇವತ್ತು ನಾಳೆ ಎಂಬ ಮಾತಿಗೆ ನಿಮ್ಮ ಒತ್ತಡ ಸಹಜವಾಗಿ ಇರಬಾರದು ಎಂಬ ಅಭಿಪ್ರಾಯ ಅಲ್ಲಿದೆ. ಈ ಮಾತನ್ನು ಕೂಡ ನಾವು ಮನಗಂಡಿದ್ದೇವೆ. ಈ ಸಂದರ್ಭದಲ್ಲಿ ಈ ಒಂದು ಬಿಲ್ ಬಗ್ಗೆ ಅಮೂಲಾಗ್ರವಾದ ಒಂದು ಚರ್ಚೆ ಆಗಬೇಕು ಎನ್ನತಕ್ಕಂಥ ಒಂದು ಅನಿಸಿಕೆ ಇವತ್ತು ನಮ್ಮೆಲ್ಲರದ್ದು ಇದೆ. ಈ ಕಡೆ ನಮಗೆ ಮತ್ತು ಆ ಕಡೆ ನಿಮಗೂ ಇದೆ. ಇವತ್ತು ಈ ಮಸೂದೆಯ ಬಗ್ಗೆ ಚರ್ಚೆಯಾಗಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಮಸೂದೆಯ ಮೆರಿಟ್ಸ್ ಮೇಲೆ ಹೋಗತಕ್ಕಂಥ ಸಂದರ್ಭ ಇದಲ್ಲ. ನಮ್ಮು ಪ್ರಕಾರ ಕಾರಣಗಳೇನಿವೆ, ಆ ಎಲ್ಲಾ ಪಾಯಿಂಟ್ಸ್‌ಗಳೇನಿವೆ ಅದು ಅದರ ಪರವಾಗಿ ಇವೆ. ಅಧಿಕಾರ ವಿಕೇಂದ್ರೀಕರಣ ಇರಬಹುದು, ಮತ್ತೊಂದು ಇರಬಹುದು, ಇದರ ಬಗ್ಗೆ ವಿವರಗಳಿಗೆ ನಾವು ಹೋಗುವುದಿಲ್ಲ. ಆದ್ದರಿಂದ, ಮಾನ್ಯ ಸಭಾಧ್ಯಕ್ಷರೇ, ಚರ್ಚೆಗೋಸ್ಕರ ನಾವು ಒಳ್ಳೆಯ ವಾತಾವರಣವನ್ನು ಅಥವಾ ಪರಿಸರವನ್ನು ಈ ಸಂದರ್ಭದಲ್ಲಿ ನಾವೆಲ್ಲರೂ ಸೇರಿ ಸೃಷ್ಟಿ ಮಾಡತಕ್ಕ ಅವಶ್ಯಕತೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು, ಬೇರೆ ಪಕ್ಷದ ನಾಯಕ ಮಿತ್ರರು, ಸದಸ್ಯ ಮಿತ್ರರು ಇದಕ್ಕೆ ಒಪ್ಪುತ್ತಾರೆ ಎಂಬ, ಭಾವನೆಯಿಂದ ಈ ಮಾತನ್ನು ಇಟ್ಟಿದ್ದೇನೆ. ಅವರು ಏನು ಸಲಹೆ ಮಾಡಿದ್ದಾರೆ, ಆ ಸಲಹೆಯ ಹಿನ್ನೆಲೆಯಲ್ಲಿ ನಾನು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ. ನಮ್ಮ ಸರ್ಕಾರದ ಪರವಾಗಿ ಇಲ್ಲಿಯವರೆಗೆ ಹರಿಬರಿಯಲ್ಲಿ ಒಂದು ಸೆಕೆಂಡೂ ಕೂಡ ನಾವು ಏನೂ ಮಾಡತಕ್ಕ ಪ್ರಯತ್ನ ಮಾಡಿಲ್ಲ. ವಿನಂತಿ ಮಾತನ್ನು ಬಿಟ್ಟರೆ ನಾವು ಏನೇನೂ ಕೂಡ ಮಾಡಿಲ್ಲ. ಬೇರೆ ವಿಚಾರ ಏನು ಎಂದು ಇಲ್ಲಿ ಪ್ರಸ್ತಾಪ ಮಾಡಬಾರದು. ಏಕೆಂದರೆ, ನಿಮ್ಮ ಸಲಹೆಗಳು ಆ ರೀತಿ ಬಂದಾಗ, ನಾವು ಏನೂ ಕೂಡ ಮಾಡಬಾರದು. ಆ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಇವತ್ತು ಒಂದು ವಾತಾವರಣವನ್ನು ಸೃಷ್ಟಿ ಮಾಡಬೇಕು, ಸಮಗ್ರವಾಗಿ ಮಸೂದೆಯ ಚರ್ಚೆಗೆ ಸದವಕಾಶ ಉದ್ಭವವಾಗಬೇಕು; ಎನ್ನತಕ್ಕ ದೃಷ್ಟಿಯಿಂದ, ಇವತ್ತು ನಾನು ಸರ್ಕಾರದ ಪರವಾಗಿ ಸ್ಪಷ್ಟವಾಗಿ, ಅಧ್ಯಕ್ಷರ ಮುಖಾಂತರ ವಿರೋಧಪಕ್ಷದ ನಾಯಕರ ಗಮನಕ್ಕೆ ತರುತ್ತಿದ್ದೇನೆ ಮತ್ತು ಇತರೆ ಮಿತ್ರರ ಗಮನಕ್ಕೂ ತರುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರು, ಇವತ್ತು ನಮ್ಮನ್ನು ನಿಮ್ಮನ್ನು ಅವರ ಕೊಠಡಿಗೆ ಕರೆಯಲಿ, ಸರ್ಕಾರದ ಪರವಾಗಿ ನಾವು ಬರುವುದಕ್ಕೆ ಸಿದ್ಧವಾಗಿದ್ದೇವೆ. ಅಂದರೆ ಮುಕ್ತ ವಾತಾವರಣದಲ್ಲಿ ಈ ಮಸೂದೆ ಚರ್ಚೆಯಾಗುವುದಕ್ಕೆ ಯಾವ ರೀತಿಯ ತೀರ್ಮಾನವನ್ನು ತಮ್ಮ ಖಾಸಗಿ ಕೊಠಡಿಯಲ್ಲಿ ಮಾತನಾಡಿ ತೀರ್ಮಾನ ಒಂದು ಮಾಡಬೇಕೋ ಅದಕ್ಕೆ ಸರ್ಕಾರ ಸಿದ್ಧವಾಗಿದೆ. ಆದರೆ ಒಂದೇ ಒಂದು ವಿಚಾರವನ್ನು ತಮ್ಮ ಮುಖಾಂತರ ನಾನು ವಿರೋಧಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ನಾವು ಬಹಳ ಮುಂದೆ ಹೋಗಿ, ಬಹಳ ದಿನಗಳವರೆಗೆ ಚರ್ಚೆ ಮಾಡಿದರೂ ಕಲಮುಗಳು ಅಷ್ಟೆ ಇವೆ; ಮುಖ್ಯವಾಗಿ 3–4 ಕಲಮುಗಳನ್ನು ಬಿಟ್ಟರೆ ಎಷ್ಟೇ ಚರ್ಚೆ ಮಾಡಿದರೂ ಅಷ್ಟೆ ಆದ್ದರಿಂದ, ಅತಿ ಶೀಘ್ರವಾಗಿ ಈ ಮಸೂದೆಯನ್ನು ಚರ್ಚೆಗೆ ಇಟ್ಟುಕೊಳ್ಳೋಣ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಎಷ್ಟೇ ಒಂದು ವ್ಯತ್ಯಾಸ ಇದ್ದರೂ ಕೂಡ, ಕಹಿ ಪ್ರಸಂಗಗಳು ಬಂದರೂ ಕೂಡ ನಾವು ಅದನ್ನು ಬದಿಗೊತ್ತಿ, ಒಳ್ಳೆಯ

ವಾತಾವರಣವನ್ನು ಸೃಷ್ಟಿ ಮಾಡಿಕೊಂಡು ಹೋಗೋಣ ಎಂಬ ಮಾತನ್ನು ಮತ್ತೊಂದು ಸಾರಿ ತಮ್ಮ ಮುಖಾಂತರ ಹೇಳಿ, ಸದನವನ್ನು ಸ್ವಲ್ಪ ಕಾಲ ಮುಂದಕ್ಕೆ ಹಾಕಿದರೆ ಒಳಿತು ಎಂದು ನನ್ನ ಭಾವನೆ. ತಾವು ವಿರೋಧಪಕ್ಷದ ನಾಯಕರು ಮತ್ತು ಅವರ ಕಡೆಯಿಂದ ಯಾರು ಯಾರು ಬರುತ್ತಾರೆ, ಅವರನ್ನೂ ತಾವು ಕರೆಯಿರಿ, ಬೇರೆ ಪಕ್ಷದ ಮುಖಂಡರನ್ನೂ ಕರೆಯಿರಿ, ನಾವು ಕೂಡ ಬರುತ್ತೇವೆ. ತಮ್ಮ ಅಧ್ಯಕ್ಷತೆಯಲ್ಲಿ ತಾವು ಯಾವ ಸಲಹೆಯನ್ನು ಮಾನ್ಯ ವಿರೋಧಪಕ್ಷದ ನಾಯಕರುಗಳ ಅಭಿಪ್ರಾಯದ ಜೊತೆಗೆ ಕೊಡುತ್ತೀರಿ, ಅದನ್ನು ನೋಡಿ, ಒಂದು ತೀರ್ಮಾನ ಮಾಡಿಕೊಂಡು ಹೋಗೋಣ. ಇಂದು ಮತ್ತು ನಾಳೆ ಏನು ಸಲಹೆ ಕೊಟ್ಟಿದ್ದೀರಿ, ನಮ್ಮ ಕಾರ್ಯಕಲಾಪದ ಪಟ್ಟಿಯಲ್ಲಿ ಬೇರೆ ಬೇರೆ ವಿಚಾರಗಳು ಇವೆ. ಬರಗಾಲ ಇದೆ, ಹಣಕಾಸು ವಿನಿಯೋಗ ಮಸೂದೆ, ಇವಲ್ಲದೆ ಬೇರೆ ಬೇರೆ ಬಿಲ್ಲುಗಳು ಇವೆ. ಲ್ಯಾಂಡ್ ರೆವಿನ್ಯೂ ಆಕ್ಟ್ ತಿದ್ದುಪಡಿ ಮಾಡುವುದು ಇದೆ, ಲ್ಯಾಂಡ್ ರಿಫಾರಮ್ಸ್ ಆಕ್ಟ್ ತಿದ್ದುಪಡಿ, ತುಂಡು ಭೂಮಿಗೆ ಸಂಬಂಧಪಟ್ಟಂತೆ ಇದೆ, ಹೀಗೆ ಕೆಲವು ಇವೆ. ಇದರ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಇವತ್ತು ನಾಳೆ ಕಾರ್ಯಕಲಾಪಗಳು ಆದ ಮೇಲೆ, We don't mind to sit. ಬಿ.ಎ.ಸಿ. ನಾಳೆ ಕರೆಯುವಹಾಗಿದ್ದರೆ, ಇವತ್ತು ನಾಳೆ ಕಾರ್ಯಕಲಾಪ ಆದ ಮೇಲೆ, ನಾಳೆ ಸೇರಿ, ಯಾವಾಗ ಮಸೂದೆ ತೆಗೆದುಕೊಳ್ಳಬೇಕೆಂದು, ಕಾನೂನು ಬದ್ಧವಾಗಿ ಒಂದು ತಾರೀಖನ್ನು ನಿಗದಿ ಮಾಡಬೇಕು. ಈ ವಿಚಾರವನ್ನು ಸಹ ಸೇರಿಕೊಂಡಂತೆ ಮಾತನಾಡಿದರೆ ಬಹಳ ಒಳ್ಳೆಯದು. ಅದಕ್ಕೆ ಸರ್ಕಾರ ಸಿದ್ಧವಾಗಿದೆ. ಇಷ್ಟು ಮಾತನ್ನು ಹೇಳಿ ತಮಗೆ ವಂದಿಸುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಸಭಾನಾಯಕರು ಹೇಳಿದ್ದನ್ನು ನಾವು ಸ್ವಾಗತ ಮಾಡುತ್ತೇವೆ. ತಮ್ಮ ಕೊಠಡಿಗೆ ಬರುವುದಕ್ಕೆ ನಾವೂ ಸಿದ್ಧ ಇದ್ದೇವೆ. ಈಗಲೇ ಈ ಕೆಲಸವನ್ನು ದಯವಿಟ್ಟು ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸಭಾನಾಯಕರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ತಾವು ಮಾತನಾಡಿ, ಇದನ್ನು ಬಗೆಹರಿಸಿದರೆ ಒಳ್ಳೆಯದು.

ಶ್ರೀ ವಾಟ್ಾಳ್ ನಾಗರಾಜ್ :– ಒಳ್ಳೆಯ ವಾತಾವರಣಕ್ಕೆ ಇದು ದಾರಿ ಮಾಡಿಕೊಟ್ಟಿದೆ. ಅದರಂತೆ ತಮ್ಮ ಮುಖಂಡತ್ವದಲ್ಲಿ ಸಭೆ ಕರೆಯಿರಿ.

ಅಧ್ಯಕ್ಷರು :– ಈಗ ಸಭೆಯನ್ನು ಮುಂದೂಡಲಾಗುತ್ತಿದೆ ಮತ್ತೆ 2 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1.45ಕ್ಕೆ ಮುಂದುವರೆದು ಮತ್ತೆ 2 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸಭೆಯು 2–10ಕ್ಕೆ ಮತ್ತೆ ಸಮಾವೇಶಗೊಂಡಿತು)

(ಅಧ್ಯಕ್ಷರು : ಶ್ರೀ ಎಸ್.ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದರು)

† ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಭಾನಾಯಕರು ವಿರೋಧ ಪಕ್ಷಗಳ ಮುಖಂಡರ ಒಂದು ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಟ್ಟು ಯಾವುದೇ ಒಂದು ಪ್ರತಿಷ್ಠೆಗೆ ನಿಲ್ಲದೆ ಈ ಸಮಸ್ಯೆಯನ್ನು ಬಗೆಹರಿಸಲು ಸಭಾನಾಯಕರು ತುಂಬಾ ಸಹಕಾರವನ್ನು ಕೊಟ್ಟಿದ್ದಾರೆ. ಅದೇ ರೀತಿ ತಾವು ಸಹಾ ನಮ್ಮೆಲ್ಲರನ್ನೂ ಕರೆದು ಈ ಸಮಸ್ಯೆಯನ್ನು ಬಗೆಹರಿಸುವಂಥ ಒಂದು ಪ್ರಯತ್ನವನ್ನು ಮಾಡಿದ್ದೀರಿ. ಇವತ್ತು ಏನು ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ನಾವೆಲ್ಲ ಇಲ್ಲಿ ಧರಣಿಯಲ್ಲಿ ಕುಳಿತು ನಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವಂಥ ಪ್ರಯತ್ನವನ್ನು ಮಾಡಿದೆವು, ಇವತ್ತು ನಾವು ಕೂತು ಒಂದು ಒಮ್ಮತದ ತೀರ್ಮಾನಕ್ಕೆ ಬಂದು ಇವತ್ತು ಸದನದ ಕಾರ್ಯಕಲಾಪ ಏನು ಇದೆ, ಇದನ್ನು ಮುಂದೂಡಿ ನಾಳೆ ಕಾರ್ಯಕಲಾಪ ಮುಗಿದ ಮೇಲೆ ಹೊಸದಾಗಿ ಒಂದು ಬಿಲ್ಲನ್ನು ತಂದಾಗ ಮತ್ತು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು, ಆದರ ಬಗ್ಗೆ ಒಮ್ಮತದ ಒಂದು ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ, ಬಹುಶಃ ಸಭಾನಾಯಕರು ಸಹಾ ಒಂದು ತೀರ್ಮಾನದ ಬಗ್ಗೆ ಸ್ಪಷ್ಟವಾಗಿ ಹೇಳಬಹುದು. ಜೊತೆಗೆ ಒಂದು ಮಾತನ್ನು ಆ ಸಮಯದಲ್ಲಿ ಹೇಳುವಂಥಾದ್ದು. ಸಾಕಷ್ಟು

ಬಹುಮತ ಇರುವಂಥ ಸಂದರ್ಭದಲ್ಲಿ ಈ ರೀತಿ ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಗೆಹರಿಸುವಂಥ ಪ್ರಸಂಗಗಳು ಬಂದಾಗ ಬಹುಶಃ ಸನ್ಮಾನ್ಯ ಸಭಾನಾಯಕರು ಹೊಸ ಪದ್ಧತಿಯನ್ನು ನಮ್ಮ ರಾಜ್ಯದಲ್ಲಿ ಹಾಕಿಕೊಟ್ಟರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಹೇಗೂ ಇಷ್ಟೊಂದು ಬಹುಮತ ಇದೆ, ಯಾವುದೇ ಸಮಯದಲ್ಲಿ ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಬಹುಶಃ ವಿರೋಧ ಪಕ್ಷ ಒಂದು ಮುಖಂಡರ ಅಭಿಪ್ರಾಯಗಳು ಏನು ಇದೆ ಎಂದು ಹೇಳಿ, ಅವರ ಸಲಹೆಗಳನ್ನು ತೆಗೆದುಕೊಳ್ಳತಕ್ಕಂಥ ಒಂದು ಪ್ರಯತ್ನ ಮಾಡಿಕೊನೆಗೆ ಒಂದು ಅಂತಿಮ ತೀರ್ಮಾನಕ್ಕೆ ಬಂದರೆ ಬಹುಶಃ ನಿಮಗೂ ಬಹುಮತ ಇದ್ದಾಗ ನಿಮಗೆ ಸರಿಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಆ ರೀತಿ ಈ ಒಂದು ಫೈಲುಗಳನ್ನು ಕಳುಹಿಸಿಕೊಟ್ಟು ವಿರೋಧ ಪಕ್ಷದ ಅಭಿಪ್ರಾಯಗಳನ್ನು ತೆಗೆದುಕೊಳ್ಳತಕ್ಕಂಥ ಒಂದು ಹೊಸ ಪದ್ಧತಿಯನ್ನು ಹಾಕಿಕೊಂಡರೆ ಬಹುಶಃ ಇಡೀ ದೇಶಕ್ಕೇ ಇದು ಒಂದು ಮಾದರಿಯಾಗಬಹುದು. ಆ ದಿಕ್ಕಿನಲ್ಲೂ ಸನ್ಮಾನ್ಯ ಸಭಾನಾಯಕರು ಮುಂದೆ ಬರುವ ದಿವಸಗಳಲ್ಲಿ ಯೋಚನೆಯನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಸಂದರ್ಭದಲ್ಲಿ ಸಭಾನಾಯಕರು ಮತ್ತು ತಾವು ಈ ಒಂದು ಸಮಸ್ಯೆಯನ್ನು ಬಗೆಹರಿಸಿ ಮತ್ತೆ ನಾವು ಏನು ಒಂದು ಸಲಹೆಯನ್ನು ಕೊಟ್ಟಿದ್ದೇವೆ, ಇದನ್ನು ಚರ್ಚೆಯ ನಂತರ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಬೇಕು ಎಂದು ಒಂದು ಅರ್ಥದಲ್ಲಿ ಒಂದು ಒಮ್ಮತಕ್ಕೆ ನಾವು ಬಂದಿದ್ದೇವೆ. ಆ ರೀತಿ ಸಭಾನಾಯಕರು ಸಹಕಾರವನ್ನು ಕೊಟ್ಟಿದ್ದಕ್ಕೆ ತಮಗೂ ಕೂಡಾ ವಂದಿಸಿ ಇಲ್ಲಿ ಕುಳಿತಿರತಕ್ಕಂಥ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರುಗಳು ಏನು ಇಲ್ಲಿ ಧರಣಿ ಕುಳಿತಿದ್ದಾರೋ, ಅವರೆಲ್ಲರೂ ಇಲ್ಲಿಗೆ ಬಂದು ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಒಂದು ಸುಮಧುರವಾದಂಥ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ತಾವು ಮನಸ್ಸು ಮಾಡಿದ್ದು ಬಹಳ ಸಂತೋಷ. ನಿಮ್ಮ ಜೊತೆಯಲ್ಲಿ ಸಭಾನಾಯಕರು ಎರಡು ದಿನಗಳು ಅವರು ಏನು ತಮ್ಮ ಹಠಮಾರಿತನ ಮಾಡಿದರು ಎಂದು ನಾವು ಹೇಳುವುದಕ್ಕೆ ಹೋಗಿಲ್ಲ. ಆದರೂ ಸಹಾ ಇಲ್ಲಿ ವಾದವಿವಾದಗಳು ಚರ್ಚೆಗಳು ಬಹಳ ಸಾರಿ ನಡೆಯಿತು. ಎರಡು ಮೂರು ಸಾರಿ ಸಭೆ ಸೇರಿತ್ತು. ಕೆಲವು ವಿಚಾರದಲ್ಲಿ ನಮ್ಮಲ್ಲಿ ಈ ಒಂದು ಮಸೂದೆಯನ್ನು ಹಿಂದೆ ತೆಗೆದುಕೊಳ್ಳಲೇಬೇಕು ಎನ್ನತಕ್ಕಂಥ ತೀವ್ರವಾದಂಥ ಬಹಳ ಕಠಿಣವಾದಂಥ ಪರಿಸ್ಥಿತಿ ಇಲ್ಲಿ ಉದ್ಭವವಾಗಿತ್ತು; ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಈ ಸಂದರ್ಭದಲ್ಲಿ ನಾವು ಅವರಿಗೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಈ ಮೊದಲು ಯಾವ ಒಂದು ಕಠಿಣವಾದಂಥ ಧೋರಣೆಯಲ್ಲಿದ್ದರು ಆ ಧೋರಣೆಯನ್ನು ಸ್ವಲ್ಪ ಸಡಿಲ ಮಾಡಿ ಪ್ರಜಾಪ್ರಭುತ್ವದಲ್ಲಿ ತಿಳಿ ವಾತಾವರಣ ಬರಬೇಕು ಎಂದು ಹೇಳಿ ಅವರ ಮಾರ್ಗದಿಂದ ಸ್ವಲ್ಪ ಹಿಂದೆ ಸರಿದು ಒಂದು ತೀರ್ಮಾನಕ್ಕೆ ಬಂದಿದ್ದು ಬಹಳ ಸಂತೋಷವಾಯಿತು. ನಾಳೆ ದಿವಸ ಮಾತ್ರ ಸಭೆ. ಮುಂದೆ ಯಾವತ್ತು ಈ ಒಂದು ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ನಾಳೆ ತಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಸೇರಿದಾಗ ತೀರ್ಮಾನವನ್ನು ಮಾಡೋಣ. ಅಲ್ಲಿಯವರೆಗೆ ಏನು ತಾವು ನಮ್ಮೆಲ್ಲರನ್ನು ಕರೆದು ಒಂದು ತಿಳಿ ವಾತಾವರಣವನ್ನು ತಂದಿದ್ದೀರಿ, ಅದಕ್ಕೆ ಅಭಿನಂದನೆಯನ್ನು ನಾವು ಸಲ್ಲಿಸುತ್ತೇವೆ. ಇದೇ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಮಿತ್ರರುಗಳು ಕುಳಿತಿರತಕ್ಕಂಥವರು ದಯಮಾಡಿ ತಮ್ಮ ಧರಣಿಯನ್ನು ಬಿಟ್ಟು ತಮ್ಮ ತಮ್ಮ ಆಸನಗಳಿಗೆ ಬರಬೇಕು. ಅವರು ಏನು ಒತ್ತಾಯ ಮಾಡಿದರೋ ಆ ಒತ್ತಾಯ ಸ್ವಲ್ಪ ಹೆಚ್ಚುಕಡಿಮೆ ಕೊಡುವುದು ತೆಗೆದುಕೊಳ್ಳುವುದು ಎರಡೂ ತೀರ್ಮಾನವಾಗಿ ಒಂದು ಮಧುರವಾದ ವಾತಾವರಣವನ್ನು ಕಲ್ಪಿಸಬೇಕು ಎಂದು ಹೇಳಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಪ್ರಾರ್ಥನೆಯನ್ನು ಮಾಡುತ್ತಿದ್ದೇನೆ. ದಯವಿಟ್ಟು ಅವರು ದಯಮಾಡಿಸಿ ಅವರ ಅನಿಸಿಕೆಗಳನ್ನು ಹೇಳಬೇಕು ಎಂದು ಹೇಳಿ ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕಾದಾಗ ಒಂದು ಮಾತನ್ನು ಹೇಳಿದೆ. ಇದನ್ನು ಮುಂದೆ ಚರ್ಚೆಗೆ ತೆಗೆದುಕೊಂಡು ನಂತರ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಲುಹಿಸಬೇಕು

ಎನ್ನತಕ್ಕಂಥ ಒಂದು ಒಮ್ಮತದ ತೀರ್ಮಾನಕ್ಕೆ ಬಂದಿದ್ದೇವೆ ಎನ್ನುವ ಮಾತನ್ನು ನಾನೇ ಹೇಳಿದೆ. ಬಹುಶಃ ಆ ರೀತಿ ಒಂದು ತೀರ್ಮಾನಕ್ಕೆ ಬಂದಿಲ್ಲ, ನಾನು ಆ ಮಾತನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ. ಏಕೆಂದರೆ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ಅಭಿಪ್ರಾಯ ಬೇರೆ ರೀತಿ ಬರಬಹುದು. ಅದಕ್ಕೋಸ್ಕರ ನಾಳೆ ನಾವು ಕುಳಿತಾಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತುಕೊಂಡು ಮುಂದೆ ಏನು ಮಾಡಬೇಕು, ಆದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು, ಮುಂದೆ ಈ ಬಿಲ್ಲನ್ನು ಯಾವಾಗ ತೆಗೆದುಕೊಳ್ಳಬೇಕೆಂದು ನಾಳೆ ಕುಳಿತುಕೊಂಡು ತೀರ್ಮಾನವನ್ನು ಮಾಡುತ್ತೇವೆ, ಆ ತೀರ್ಮಾನಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ.

Sri Modagekar Desai Krishna Rao Chudamani : The aim of this Bill is to give powers to the grass-root level. I think this bill is brought very hurriedly without seeing the implications. I want to mention about Section 161. The reservation is there for SC/STs.

Mr. Speaker : I will give you a chance when the Bill comes up for discussion.

Sri Modagekar Desai Krishna Rao Chudamani : Sir, I want to speak about reservation.

Mr. Speaker : Including reservation, you can speak when the Bill comes up for discussion.

ಶ್ರೀ ಸಿ. ಬೈರೇಗೌಡ : ಮಾನ್ಯ ಸಭಾಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ಏನು ಒಂದು ಬಿಗಿ ವಾತಾವರಣ ಇತ್ತೋ, ಅದು ಮೊದಲಿನಿಂದಲೂ ಕೂಡಾ ನಾನು ಇದನ್ನು ತಿಳಿಗೊಳಿಸಬೇಕು ಎನ್ನತಕ್ಕಂಥ ಪ್ರಯತ್ನವನ್ನು ನಾನು ಮಾಡಿದೆ. ಅದಕ್ಕೆ ಮಾನ್ಯ ನಾಯಕರು ಮತ್ತು ತಾವು ಸಂಪೂರ್ಣವಾದಂಥ ಸಹಕಾರವನ್ನು ಕೊಟ್ಟಿದ್ದೀರಿ. ಆದ್ದರಿಂದ ನಾನು ಪ್ರಮುಖವಾಗಿ ತಮಗೂ ಮತ್ತು ಮಾನ್ಯ ಸಭಾನಾಯಕರಿಗೂ ಕೂಡಾ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಈಗ ಏನು ವಾತಾವರಣ ನಿರ್ಮಾಣವಾಗಿದೆ, ಆ ವಾತಾವರಣವನ್ನು ತಾವು ಇಲ್ಲಿ ಕುಳಿತಿರತಕ್ಕಂಥ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ನನ್ನ ಸ್ನೇಹಿತರುಗಳನ್ನು ಅವರವರ ಸ್ಥಾನಕ್ಕೆ ಬರುವ ರೀತಿಯಾಗಿ ತಾವು ಅವರಿಗೂ ತಿಳಿವಳಿಕೆಯನ್ನು ಕೊಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರವರು, ಬೈರೇಗೌಡರು ಹೇಳಿರತಕ್ಕಂಥ ಮಾತುಗಳನ್ನು ನಾನು ಕೇಳಿದ್ದೇನೆ. ಈಗ ಒಂದು ತಿಳಿಯಾಗಿರತಕ್ಕಂಥ ವಾತಾವರಣ ಸೃಷ್ಟಿ ಮಾಡಬೇಕು ಎನ್ನತಕ್ಕಂಥ ಸದುದ್ದೇಶದಿಂದ ಇವತ್ತು ಈ ಕೆಲಸವನ್ನು ನಾವೆಲ್ಲರೂ ಸೇರಿ ಇಲ್ಲಿ ಮಾಡಿದ್ದೇವೆ. ಇವತ್ತು ಅಭಿನಂದನೆಯನ್ನು ನನಗೆ ತಾವು ಸಲ್ಲಿಸಿದರೆ ನಾನೂ ಕೂಡಾ ತಮ್ಮಗಳೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿರೋಧ ಪಕ್ಷದ ನಾಯಕರು ಮತ್ತು ಉಳಿದಿರತಕ್ಕವರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸದನದಲ್ಲಿ ನಾವೆಲ್ಲರು ಸೇರಿ ಒಮ್ಮತದಿಂದ ಹೋಗತಕ್ಕ ಸಂದರ್ಭದಲ್ಲಿ ದಿನವೂ ಅಭಿಪ್ರಾಯಗಳು ಬರುತ್ತವೆ, ವೋಟಿಂಗ್ ಆಗಬಹುದು, ಸೋಲಬಹುದು, ಗೆಲ್ಲಬಹುದು, ಅದೇನೆ ಇರಲಿ. ಆದರೆ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸುವಾಗ ಸೋಲು ಗೆಲುವಿನ ಪರದೆಯನ್ನು ಬದಿಗೊತ್ತು ಕಲಾಪಗಳನ್ನು ನಡೆಸುವಂತಹ ಒಂದು ವ್ಯವಸ್ಥೆ ಮಾಡಿದ್ದೇವೆ. ಈ ಮಾತಿನ ದೃಷ್ಟಿಯಿಂದ ಸದನದಲ್ಲಿ ಅಧ್ಯಕ್ಷರಿಗೆ ಸಹಕಾರವನ್ನು ನಾವೆಲ್ಲರೂ ಕೊಡಬೇಕು. ಆದ್ದರಿಂದ ಈ ಸಂದರ್ಭದಲ್ಲಿ ಎಲ್ಲರಿಗೂ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕಾರ್ಯಕಲಾಪಗಳ ಪಟ್ಟಿಯಲ್ಲಿ ಇರತಕ್ಕ ವಿಷಯಗಳ ಅಂದರೆ ಬರಗಾಲ, ಹಣ ವಿನಿಯೋಗ ಮಸೂದೆ ಹಾಗೂ ನಾಳೆ ಖಾಸಗಿ ಸದಸ್ಯರ ಕಲಾಪಗಳನ್ನು ನಡೆಸಲು ಅವರು ಅನುವು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ತಮ್ಮ ಮುಖಾಂತರ ಮತ್ತೊಂದು ಸಾರಿ ಅಭಿನಂದಿಸುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಲು ತೀರ್ಮಾನ ಆಗಿದೆ ಎಂದು ಹೇಳಿದ ನಂತರ ಅದು ಸರಿಯಲ್ಲವೆಂದು ಹೇಳಿದರು. ಆದ್ದರಿಂದ ಅದನ್ನು ಮತ್ತೊಂದು ಸಾರಿ ಹೇಳುವ ಅವಶ್ಯಕತೆ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ನಾಳೆ ತಾವು ಸದನದ ಕಾರ್ಯಕಲಾಪಗಳ ಸಮಿತಿಯ

ಸಭೆ ಕರೆದ ಮೇಲೆ, ಈ ಒಂದು ಪಂಚಾಯತ್ ರಾಜ್ ಮಸೂದೆಯನ್ನು ಯಾವಾಗ ತೆಗೆದುಕೊಳ್ಳಬೇಕೆಂಬುದನ್ನು ನಾವು ಕುಳಿತುಕೊಂಡು ತೀರ್ಮಾನ ಮಾಡಬಹುದು. ಈಗ ಕಲಾಪಗಳನ್ನು ಸದನದಲ್ಲಿ ನಡೆಸಿಕೊಂಡು ಹೋಗೋಣ. ಈಗ ಮತ್ತೊಂದು ಸಾರಿ ತಮ್ಮ ಮುಖಾಂತರ ವಿರೋಧ ಪಕ್ಷದ ನಾಯಕರಿಗೂ ಹಾಗೂ ಧರಣಿಯಲ್ಲಿ ಕುಳಿತಿರತಕ್ಕ ಎಲ್ಲಾ ಮಿತ್ರರುಗಳು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ನಾವೆಲ್ಲರೂ ಸೇರಿ ಕಾರ್ಯಕಲಾಪವನ್ನು ಪ್ರಾರಂಭ ಮಾಡೋಣ. ಈ ಸಮಯದಲ್ಲಿ ತಾವು ತಮ್ಮ ಸಂಯಮವನ್ನು ತೋರಿಸಿದ ಬಗ್ಗೆ ಮತ್ತೊಂದು ಸಾರಿ ಹೇಳುವ ಅವಶ್ಯಕತೆ ಇಲ್ಲ. ನಾವೆಲ್ಲರೂ ಇದನ್ನು ಬಹಳ ಮೆಚ್ಚಿಕೊಳ್ಳಬೇಕು, ತಾವು ಎಲ್ಲರನ್ನೂ ಕರೆದು ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿಮಾಡುವುದಕ್ಕೋಸ್ಕರ ತಮ್ಮ ಮಾರ್ಗದರ್ಶನ ಇಲ್ಲಿ ನಮಗೆ ಅಂದರೆ ಸರ್ಕಾರಕ್ಕೆ ಮತ್ತು ವಿರೋಧ ಪಕ್ಷದವರಿಗೂ ಸಿಕ್ಕಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಸದನದ ಪರವಾಗಿ ಸರ್ಕಾರದ ಪರವಾಗಿ ಹಾಗೂ ಎಲ್ಲರ ಪರವಾಗಿ ಈ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸುತ್ತೇನೆ. ತಮ್ಮ ಮಾರ್ಗದರ್ಶನ ನಮಗೂ ಇದೇ ರೀತಿ ಸಿಗಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ಸಹಕಾರವನ್ನು ನಾವು ಮತ್ತು ಆ ಕಡೆ ಕುಳಿತಿರುವವರು ಎಲ್ಲರೂ ಕೊಡುತ್ತೇವೆಂದು ಹೇಳಿ ಮತ್ತೊಮ್ಮೆ ತಮಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಹಾಗೂ ಇತರೇ ಎಲ್ಲರಿಗೂ ಅಭಿನಂದಿಸುತ್ತೇನೆ.

ಅಧ್ಯಕ್ಷರು : ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಈಗ ದಯಮಾಡಿಸಬೇಕು.

(ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಆಸನಗಳಿಗೆ ತೆರಳಿದರು)

† ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಕಳೆದ ಎರಡು ದಿನಗಳಿಂದ ಈ ಸದನದಲ್ಲಿ ನಡೆದಂತಹ ಘಟನೆಗಳು ನಮಗೂ ಸಂತೋಷ ತಂದಿಲ್ಲ. ತಮಗಂತೂ ತಂದಿಲ್ಲವೆಂದು ಹೇಳುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ಅದರಲ್ಲೂ ವಿಶೇಷವಾಗಿ ಹಿರಿಯ ಮತ್ತು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದಂತಹ ಶ್ರೀಮತಿ ನಾಗರತ್ನಮ್ಮನವರು ಬಹಳ ಮನನೊಂದು ಕೆಲವು ಮಾತುಗಳನ್ನಾಡಿದ್ದಾರೆ. ನಾನು ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ನನಗೂ ಅದು ಬೇಕಿರಲಿಕ್ಕಿಲ್ಲ. ಆದರೆ ಇಂತಹ ಘಟನೆಗಳು ಅನಿವಾರ್ಯವಾಗಿ ನಡೆಯುತ್ತವೆ. ಪ್ರಮಾಣಿಕವಾಗಿ ನಾವು ಈ ಮಸೂದೆಯ ಬಗ್ಗೆ ಇರತಕ್ಕ ಕಳಕಳಿಯನ್ನು ವ್ಯಕ್ತಮಾಡಲು ಅದನ್ನು ಸಾಧನವಾಗಿ ಬಳಸಿದ್ದೇವೆ. ಅದಕ್ಕಿಂತ ಹೆಚ್ಚು ದೂರ ಹೇಳಲಿಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಅನೇಕ ವಿಚಾರಗಳನ್ನು ಸಭಾನಾಯಕರು ಮತ್ತು ನನ್ನ ಮಿತ್ರರು ಹೇಳಿದ್ದಾರೆ. ಮೊದಲು ಈ ಒಂದು ಕಗ್ಗಂಟನ್ನು ಬಿಚ್ಚುವುದಕ್ಕೆ ತಾವು ವಹಿಸಿದಂಥ ಪಾತ್ರ ಬರೀ ಪ್ರಶಂಸನೀಯ ಅಷ್ಟೇ ಅಲ್ಲ. ಸದನದ ದೃಷ್ಟಿಯಿಂದ ಶಾಸನ ಸಭೆಯ ಹೊರಗೆ ಕೂಡ ಜನ ಮೆಚ್ಚತಕ್ಕಂಥ ಒಂದು ಪ್ರಮುಖವಾದಂಥ ಕೆಲಸವನ್ನು ತಾವು ನಿರ್ವಹಿಸಿದ್ದೀರಿ. ನಿಜವಾಗಿಯೂ ಒಂದು ದೃಷ್ಟಿಯಿಂದ ಇದು ಕೃಷ್ಣ ಸಂಧಾನ ಎಂದು ಹೇಳಿದರೆ ಸಭೆ ಒಪ್ಪುತ್ತದೆ ಎಂದು ನಾನು ಭಾವನೆ ಮಾಡಿದ್ದೇನೆ. ಅದಕ್ಕಾಗಿ ನಾವು ನಿಮಗೆ ಆಭಾರಿಯಾಗಿದ್ದೇವೆ. ತಮ್ಮ ಮನಸ್ಸಿಗೆ ನೋವಾಗುವಂತೆ ನಾವು ನಡೆದುಕೊಂಡಿದ್ದರೆ, ಕ್ಷಮಿಸಬೇಕೆಂದು ಸಹ ಪ್ರಾರ್ಥನೆ ಮಾಡುತ್ತೇನೆ. ಮುಖ್ಯವಾಗಿ ಇದ್ದಂಥ ವಿಷಯ ಚರ್ಚೆಯಿಂದ ಸಂಧಾನಗಳ ಮೂಲಕ ಇದನ್ನು ಬಗೆಹರಿಸಬೇಕೆಂಬ ಪ್ರಯತ್ನವನ್ನು ನಮ್ಮ ಮಿತ್ರರು ಅನೇಕರು ಅಂದರೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ಶ್ರೀಮಾನ್ ಯಡಿಯೂರಪ್ಪನವರು, ಶ್ರೀಮಾನ್ ಬೈರೇಗೌಡರು ಎಲ್ಲರೂ ಈ ದಿಸೆಯಲ್ಲಿ ಏನು ಪ್ರಯತ್ನ ಮಾಡಿದ್ದಾರೆ ಅವರೆಲ್ಲರಿಗೂ ನನ್ನ ಪಕ್ಷದ ವತಿಯಿಂದ ವಿರೋಧ ಪಕ್ಷದ ನಾಯಕನಾಗಿ ನನ್ನ ಕೃತಜ್ಞತೆಗಳನ್ನು ಸಮರ್ಪಣೆ ಮಾಡುತ್ತೇನೆ. ಬಹಳ ಮುಖ್ಯವಾಗಿ ಇದರಲ್ಲಿ ಪ್ರಾರಂಭಕ್ಕೆ ಈ ವಿಚಾರ ಸದನದಲ್ಲಿ ಬಂದಾಗ ಈಗ ತಕ್ಷಣಕ್ಕೆ ತೆಗೆದುಕೊಳ್ಳುವುದು ಬೇಡ, ಇದಕ್ಕೆ ಸಮಯ ಬೇಕಾಗುತ್ತದೆ, ನೀವು ಪ್ರತಿಪಕ್ಷಗಳನ್ನು ಕರೆದು ಚರ್ಚೆಮಾಡಿ ಮಸೂದೆಯನ್ನು ತಂದಿದ್ದರೆ ಅನುಕೂಲವಾಗುತ್ತಿತ್ತು ಎನ್ನತಕ್ಕ ಮಾತನ್ನು ಹೇಳಿದ್ದೇನೆ. ಸಂಸದೀಯ ನಡವಳಿಕೆಯಂತೆ ಸಾಧಾರಣವಾಗಿ ಇಂತಹ ಮಸೂದೆಯನ್ನು ತರುವಾಗ ಕೊಡಬೇಕಾದಂಥ ಏಳು ದಿವಸಗಳ ಸಮಯ ಕೊಟ್ಟಿದ್ದರೆ ನಮಗೆ ಅಷ್ಟಾದರೂ ಸಮಯ ಸಿಕ್ಕುತ್ತಿತ್ತು ಎನ್ನುವ ಮಾತನ್ನು ಹೇಳಿದ್ದೇನೆ. ಹಾಗೆಯೇ ನಮ್ಮ ಅಭಿಪ್ರಾಯವನ್ನು ಕ್ರೋಢೀಕರಿಸುವುದಕ್ಕೆ ವಿಭಿನ್ನವಾದಂಥ ನಮ್ಮ ಸಂಸದೀಯ ವ್ಯವಸ್ಥೆಯಲ್ಲಿರತಕ್ಕಂಥ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರೆ ಸ್ವಲ್ಪಮಟ್ಟಿಗೆ ಸಾಧ್ಯವಾಗುತ್ತಿತ್ತು. ಇದು ಯಾವುದನ್ನೂ ಮಾಡದೇ ಇದ್ದಾಗ

ನಾವು ಧರಣಿ ಕೂರತಕ್ಕಂಥ ಒಂದು ನಿರ್ಣಯಕ್ಕೆ ಬರಬೇಕಾಯಿತು. ಅದರಲ್ಲಿ ಬಹುಪಾಲು ಸರ್ಕಾರದ್ದೇ ಇದೆ ಎಂದು ಹೇಳದೇ ವಿಧಿಯಿಲ್ಲ. ಈಗ ಅದು ಮುಗಿದಿದೆ. ಆದ್ದರಿಂದ ಪುನಃ ಪ್ರಸ್ತಾಪ ಮಾಡುವುದಿಲ್ಲ, ಅದು ಅನಾವಶ್ಯಕ. ಈಗ ನಾವು ನೀವು ಅಧ್ಯಕ್ಷರ ಕೊಠಡಿಯಲ್ಲಿ ಏನು ವಿಚಾರ ನಡೆದಿದೆ ಅದನ್ನು ಒಪ್ಪಿಕೊಂಡಿದ್ದೇವೆ. ಈ ಸಭೆಯನ್ನು ನಾಳೆಯವರೆಗೆ ಕರೆದಿರತಕ್ಕಂತಾದ್ದು ಇದೆ. ನಾಳೆ ದಿವಸದವರೆಗೆ ನಮ್ಮ ಬಿಸಿನೆಸ್ ಏನು ಇದೆ, ಅದನ್ನು ನಡೆಸಿಕೊಡಲಿಕ್ಕೆ ನಾವೂ ಒಪ್ಪಿಕೊಂಡಿದ್ದೇವೆ. ಈ ಅಧಿವೇಶನದಲ್ಲಿ ಇದನ್ನು ತರುವುದಿಲ್ಲ ಎನ್ನತಕ್ಕಂಥ ಅಭಿಪ್ರಾಯವನ್ನು ತಾವು ಕೊಟ್ಟಿದ್ದೀರಿ. ಇದಕ್ಕಾಗಿ ನಿಮಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಂದೆ ಯಾವ ದಿವಸವನ್ನು ನಿಗದಿ ಮಾಡುತ್ತೀರಿ ಎಂಬುದು ತಮಗೆ ಸೇರಿದ್ದು. ಆ ದಿವಸದಲ್ಲಿ ಈ ಚರ್ಚೆ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಈ ಒಂದು ಮಸೂದೆಯ ಮಹತ್ವವನ್ನು ತಾವು ಗಮನದಲ್ಲಿಟ್ಟುಕೊಂಡು ಕನಿಷ್ಠ ಈ ಮಸೂದೆಯ ಚರ್ಚೆಗೆ ಎರಡು ವಾರ ಆದರೂ ಸಮಯ ಕೊಡಬೇಕಾಗುತ್ತದೆ. ಎರಡು ವಾರಗಳು ಅಂದರೆ ಒಟ್ಟಾರೆ ನಮಗೆ 10 ದಿವಸ ಚರ್ಚೆಗೆ ಅವಕಾಶ ಸಿಕ್ಕುತ್ತದೆ ಎಂದು ಕಾಣುತ್ತದೆ. ತಾವು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ನಮಗೆ ಈ ಮಸೂದೆ ಸಮಾಧಾನವಾಗುವವರೆಗೂ ನಾನು ಮತ್ತು ನನ್ನ ಸದಸ್ಯರುಗಳಿಂದ ಪ್ರತಿಭಟನೆ ಅವಿಶ್ರಾಂತವಾಗಿ ನಡೆಯಿತು. ಅದಕ್ಕಾಗಿ ನಮಗೆ ಸಮಾಧಾನ ಇಲ್ಲದೇ ಇರುವುದರಿಂದ ಒಂದು ದೃಷ್ಟಿಯಿಂದ ಒಟ್ಟಾರೆ ಮಸೂದೆಯನ್ನು ತಿರುಚಿಹಾಕತಕ್ಕಂಥ ಪ್ರಯತ್ನ ಆಗತಕ್ಕಂಥ ಅಭಿಪ್ರಾಯವನ್ನು ನಾವು ಹೊಂದಿದ್ದೇವೆ. ಅದು ನಿಮಗೆ ಸರಿ ಎಂದು ಕಾಣಬಹುದು, ಅಥವಾ ಇಲ್ಲದೇ ಇರಬಹುದು. ಆ ಅಭಿಪ್ರಾಯ ನಮಗೆ ಸರಿಯಾದ ರೀತಿಯಲ್ಲಿ ಪರಿಹಾರ ಆಗದ ಹೊರತು ನಾವು ಈ ಕಪ್ಪುಬಟ್ಟೆ ತೆಗೆಯುವುದು ಸರಿಯಾಗುವುದಿಲ್ಲ. ಅದಕ್ಕಾಗಿ ನಾನು ನನ್ನ ಹೆಗಲ ಮೇಲೆ ಇಟ್ಟುಕೊಂಡಿದ್ದೇನೆ. ಇದು ಚರ್ಚೆಗೆ ಬಂದಾಗ ಮುಂದೆ ಅದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕೋ, ಇಲ್ಲವೇ ಬರೀ ಸದನದ ಸಲಹಾ ಸಮಿತಿಗೆ ಕಳುಹಿಸಬೇಕೋ, ಇಲ್ಲವೇ ಪಬ್ಲಿಕ್ ಒಪಿನಿಯನ್ ಇಲಿಸಿಟ್ ಮಾಡಲಿಕ್ಕೆ ಕಳುಹಿಸಬೇಕೋ ಇಲ್ಲಾ ಈ ಸಭೆಯಲ್ಲೇ ಚರ್ಚೆ ನಡೆದು ತೀರ್ಮಾನ ಆಗಲಿಕ್ಕೆ ಸಾಧ್ಯವೇ ಎಂಬ ವಿಚಾರವನ್ನು ಚರ್ಚೆ ಮಾಡಬೇಕಾಗುತ್ತದೆ. ಆದರೆ ಈಗ ಈ ಮಸೂದೆ ಯಾವ ಹಂತವನ್ನು ತಲುಪುತ್ತದೆಂದು ನಾನು ಈಗಲೇ ಹೇಳುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ಕಾರಣಕ್ಕೆ ನಾವು ಧರಣಿಯನ್ನು ವಾಪಸು ತೆಗೆದುಕೊಂಡಿದ್ದು ಎಂದರೆ, ಇದರ ಬಗ್ಗೆ ಚರ್ಚೆಯನ್ನು ನಾವು ತಕ್ಷಣ ತೆಗೆದುಕೊಳ್ಳುವುದಿಲ್ಲ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರಿಂದ ಈ ಆಶ್ವಾಸನೆಯನ್ನು ಕೊಟ್ಟಂಥ ಮಾನ್ಯ ಸಭಾನಾಯಕರಿಗೆ ಮತ್ತು ಕಾಂಗ್ರೆಸ್ ಪಕ್ಷದವರಿಗೂ ಕೂಡ ನಮ್ಮ ಸುಪೇಕ್ಷೆಯನ್ನು ಹೇಳುವುದು ನಮ್ಮ ಕರ್ತವ್ಯ. ಆ ಕರ್ತವ್ಯವನ್ನು ನಾವು ಮಾಡಿದ್ದೇವೆ. ಆದರೆ ಈ ಸುಪೇಕ್ಷೆ ಇಷ್ಟಕ್ಕೇ ನಿಲ್ಲಬಾರದು. ಒಟ್ಟಾರೆ ಮೂಲ ಸ್ವರೂಪವನ್ನು ಬದಲಾವಣೆ ಮಾಡಿರತಕ್ಕಂಥ ತಮ್ಮ ಅನಿಸಿಕೆಗಳ ಜೋತೆಗೆ ಕೂಡ ತಾವು ಸ್ಪಂದನ ಮಾಡಬೇಕು. ಈ ಮಸೂದೆಯ ಪರಿಣಾಮ ಏನು? ಈ ಮಸೂದೆಯನ್ನು ತಂದಿದ್ದು ಅಷ್ಟು ಸಮಂಜಸವಾಗಿಲ್ಲ ಎಂದು ಹೇಳುವಷ್ಟು ಅನುಭವ ತಮಗಿದ್ದರೆ ಮುಂದೆ ತರತಕ್ಕ ಮಸೂದೆಯೂ ಕೂಡ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಯೋಗ್ಯತೆಯನ್ನು ಪಡೆದಿದೆಯೇ, ಇಲ್ಲವೇ ಎಂಬುದರ ಬಗ್ಗೆ ವಿಮರ್ಶೆ ಮಾಡಬೇಕಾದುದು ನಮ್ಮ, ನಿಮ್ಮೆಲ್ಲರ ಕರ್ತವ್ಯ. ಇದರಲ್ಲಿ ಪಕ್ಷಗಳ ಅಭಿಪ್ರಾಯಗಳು ಬೇರೆ ಬೇರೆ ಇರಬಹುದು. ಆದರೆ ಶಾಸಕರಾಗಿ ನಾವು ಕೆಲಸಮಾಡುವಾಗ ಈ ಅಭಿಪ್ರಾಯವನ್ನು ಮುಕ್ತವಾಗಿ ಚರ್ಚೆಮಾಡೋಣ. ಈ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಿ ಎಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಒಂದು ಕಠಿಣ ಕಗ್ಗಂಟನ್ನು ಬಿಡಿಸತಕ್ಕ ದಿಶೆಯಲ್ಲಿ ಮೂಡಿಯಾ ಪಾತ್ರ ಕಡಿಮೆ ಇತ್ತು ಎಂದು ನಾನು ಹೇಳುವುದಿಲ್ಲ. ದೂರದರ್ಶನ, ಪತ್ರಿಕೆಗಳು, ರೇಡಿಯೋಗಳೂ ಕೂಡ ಇದರಲ್ಲಿ ಪ್ರಚಾರ ಕಾರ್ಯವನ್ನು ಚೆನ್ನಾಗಿ ಮಾಡಿವೆ. ಈ ರೀತಿ ಮಾಡಿದ್ದು ಸರಿಯಲ್ಲ ಎಂದು ನಮ್ಮ ಮನಸ್ಸಿಗೂ ಅನಿಸಿದೆ, ಅದೇ ರೀತಿ ಹೀಗೆ ವಿರೋಧ ಪಕ್ಷದವರನ್ನು ಕೂಡಿಸಿಕೊಂಡು ಈ ಸಭೆಯನ್ನು ನಡೆಸುವುದೂ ಸರಿಯಲ್ಲ ಎನ್ನತಕ್ಕ ರೀತಿಯಲ್ಲಿ ಎಫೆಕ್ಟೀವ್ ಆಗಿ ಕೆಲಸಮಾಡಿದ್ದಾರೆ. ಆದ್ದರಿಂದ ಅವರನ್ನೂ ಕೂಡ ಈ ಸಭೆಯ ಮೂಲಕ ವಿರೋಧಪಕ್ಷದ ನಾಯಕನಾಗಿ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಆದರೆ ಯಾವ ರೀತಿ ಇದನ್ನು ಚರ್ಚೆ ಮಾಡಬೇಕೆಂಬುದಕ್ಕೆ ಪುನಃ ತಾವು ನಮ್ಮ ಸಲಹೆಯನ್ನು ಕೇಳಿದರೆ ಅದನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಸ್ಪಷ್ಟೀಕರಣ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಬೇರೆ ಇನ್ನೇನೂ ಮಾತನಾಡುವ ಅವಶ್ಯಕತೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವಾಗ ಈ ಚರ್ಚೆಯನ್ನು ಯಾವಾಗ ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ನಾವು ಮಾತನಾಡಬೇಕಾದರೆ ನಾಳೆ ನಮ್ಮ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಅದನ್ನು ಇಟ್ಟುಕೊಳ್ಳೋಣ. ಈ ಅಧಿವೇಶನ ಎಂದರೆ ಇದರ ಅರ್ಥವೇ ಬೇರೆ ಆಗುತ್ತದೆ. ಅಧಿವೇಶನ ಎಂದರೆ ತಮ್ಮ ಅರ್ಥವೇ ಬೇರೆ, ನಮ್ಮ ಅರ್ಥವೇ ಬೇರೆ ಆಗುತ್ತದೆ. ಅಧಿವೇಶನ ಎಂದರೆ ಈ ವಾರದ ಸಿಟಿಂಗ್ ಏನಿದೆ, ಆಷ್ಟಕ್ಕೇ ಸೀಮಿತಗೊಳಿಸೋಣ. ಯಾವಾಗ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಬಗ್ಗೆ ನಾಳೆ ತೀರ್ಮಾನ ಮಾಡೋಣ.

ಅಧ್ಯಕ್ಷರು : ಈ ಸಭೆಯ ಅಧ್ಯಕ್ಷನಾಗಿ ಕಳೆದ 2 ದಿವಸಗಳ ಬೆಳವಣಿಗೆಗಳು ಮತ್ತು ನಡವಳಿಕೆಗಳು ಸಂಸದೀಯ ಪ್ರಜಾಪ್ರಭುತ್ವದ ಕೆಲವು ಗಂಭೀರ ಸಮಸ್ಯೆಗಳ ಬಗ್ಗೆ ನಾವು ಮರುಚಿಂತನೆ ಮಾಡಬೇಕಾದಂಥ ಅವಶ್ಯಕತೆಯನ್ನು ಎತ್ತಿ ತೋರಿಸುತ್ತದೆಂದು ನಾನು ಭಾವನೆ ಮಾಡುತ್ತೇನೆ. ಪಾರ್ಲಿಮೆಂಟರಿ ಡೆಮಾಕ್ರೆಸಿಯಲ್ಲಿ ಗಿವ್ ಅಂಡ್ ಟೇಕ್ ಎಂದು ಏನಿದೆ, ಇದು ಬೇಸಿಕ್ ಸ್ಟ್ರಕ್ಚರ್ ಇದರ ಜೊತೆಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ಬರತಕ್ಕದ್ದು ಸಹಜ ಹಾಗೂ ಸ್ವಾಭಾವಿಕ. ಮತ್ತೆ ಸದನದಲ್ಲಿ ಬಹುಮತ, ಅಲ್ಪ ಮತ ಎಂಬುದೂ ಕೂಡ ಈ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಗಣನೀಯ ಪಾತ್ರವನ್ನು ವಹಿಸುತ್ತವೆ. ಆದರೆ ವಿಧಾನ ಸಭೆಗಳಲ್ಲಿ ಚರ್ಚೆಗೆ ಮುಕ್ತವಾದ ಅವಕಾಶ ಸಿಕ್ಕಿತ್ತದೋ, ಇಲ್ಲವೋ ಎಂಬುದು ಮೂಲಭೂತ ಪ್ರಶ್ನೆ. ಪದೇ ಪದೇ ವಿರೋಧ ಪಕ್ಷದ ಸಂಖ್ಯಾಬಲದ ಮೇಲೆ ಅಥವಾ ಆಡಳಿತ ಪಕ್ಷದ ಸಂಖ್ಯಾಬಲದ ಮೇಲೆ ನ್ಯಾಯಾನ್ಯಾಯಗಳು ನಿಲ್ಲುವುದಿಲ್ಲ. ನಾವು ಯಾವ ವಿಚಾರಗಳನ್ನು ಚರ್ಚೆ ಮಾಡುತ್ತೇವೆ ಆ ವಿಚಾರದ ಪ್ರಾಮುಖ್ಯತೆ ಮತ್ತು ಆ ವಿಚಾರ ಎಷ್ಟರಮಟ್ಟಿಗೆ ಆವತ್ತಿನ ಸಂದರ್ಭದಲ್ಲಿ ವಸ್ತುಸ್ಥಿತಿಗೆ ಎಷ್ಟರಮಟ್ಟಿಗೆ ರೆಲವೆಂಟ್ ಆಗುತ್ತದೆ ಎಂಬುದು ಮುಖ್ಯ. ಒಟ್ಟಾರೆ ನಾನು ಅಧ್ಯಕ್ಷನಾಗಿ ಒಟ್ಟಾರೆ ಹೇಳಬೇಕಾದ್ದು ಎಂದರೆ, ಮತ್ತೆ ತಾವು ಯಾವ ಯಾವ ಸ್ಥಾನದಲ್ಲಿ ಕೂತುಕೊಳ್ಳಬೇಕೆಂದು ಜನರು ಓಟು ಕೊಟ್ಟು ಕಳುಹಿಸಿದರೋ, ಆ ಸ್ಥಾನಗಳಿಗೆ ತಾವು ಮತ್ತೆ ಸ್ಪಂಧಿಸಿದ್ದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಅದಕ್ಕಾಗಿ ಸರ್ಕಾರದವರು ನಮ್ಮ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಪ್ರತಿಷ್ಠೆಯ ಪ್ರಶ್ನೆಯಾಗಿ ಈ ವಿಚಾರಗಳನ್ನು ತೆಗೆದುಕೊಳ್ಳಲಿಲ್ಲವೆನ್ನತಕ್ಕಂಥದ್ದು ಕಳೆದ ಎರಡು ದಿವಸಗಳ ನಡವಳಿಕೆಯಲ್ಲಿ ನಮಗೆ ಅಭಿವ್ಯಕ್ತವಾದಂಥ ಒಂದು ಪ್ರಧಾನವಾದ ವಿಚಾರ. ವಿರೋಧಪಕ್ಷದ ನಾಯಕರು ಕೂಡ ಅವರು ಹಿಡಿದ ಪಟ್ಟಿಗೆ ಅವರು ತುತ್ತಾಗದೆ ಅವರು ಮತ್ತೆ ನಮ್ಮ ಸಮಾಲೋಚನೆಗೆ ಬಂದುದು ಈ ಸಭೆಯ ಪ್ರತಿಷ್ಠೆತೆಯನ್ನು ಒಟ್ಟಾರೆ ಜಾಸ್ತಿ ಮಾಡಿದೆ ಎಂದು ಹೇಳಿ ನಾನು ಭಾವಿಸುತ್ತೇನೆ. ಇನ್ನು ಮುಂದೆ ನಾವು ನೀವು ಇನ್ನೂ ನಾಲ್ಕು ವರ್ಷಗಳ ಕಾಲ ನಾವು ಜೊತೆಯಲ್ಲಿ ಕೂಡಿ ಬಾಳಬೇಕಾಗಿದೆ. ಹಾಗೆ ಕೂಡಿ ಬಾಳತಕ್ಕಂಥ ಪ್ರವೃತ್ತಿಗೆ ಔದಾರ್ಯ ಇನ್ನೊಬ್ಬರ ವಿಚಾರವನ್ನು ಅರ್ಥಮಾಡಿಕೊಳ್ಳತಕ್ಕಂಥ ಸಹನೆಯನ್ನು ಇನ್ನೂ ಜಾಸ್ತಿ ಗಳಿಸಿಕೊಳ್ಳಬೇಕೆಂದು ನಾನು ಆಶಿಸುತ್ತೇನೆ. ಇಂಗ್ಲೀಷ್‌ನಲ್ಲಿ All is well that ends well. ಎಂದು ಹೇಳುವುದನ್ನು ನಾನು ಸಹ ಹೇಳುತ್ತೇನೆ. ನಾಳೆ ಬಿಸಿನೆಸ್ ಕಾರ್ಯ ಕಲಾಪಗಳ ಸಮಿತಿಯ ಮುಂದೆ ಯಾವಾಗ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ತೀರ್ಮಾನ ಮಾಡಲಾಗುತ್ತದೆ. ಈ ನಮ್ಮ ಸಭೆಯು ಮುಂದುವರಿದು ಮತ್ತೆ ಮೂರುವರೆ ಗಂಟೆಗೆ ಸೇರಿ ಮುಂದಿನ ಕಾರ್ಯಕ್ರಮಗಳನ್ನು ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು 2–32ಕ್ಕೆ ಮುಂದುವರೆದು 3–30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 3 ಗಂಟೆ 40 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು)